# ಮುಳ್ಳುಗೋಲಿಗೆ ವಿರುದ್ಧವಾಗಿ ಒದೆಯುವದು

# (25:13-26:32)

ದಮಸ್ಕದ ದಾರಿಯಲ್ಲಿ ಕರ್ತನು ಪೌಲನಿಗೆ ದರ್ಶನ ನೀಡಿದಾಗ, "ಮುಳ್ಳುಗೋಲನ್ನು ಒದೆಯವದು ನಿನಗೆ ಕಷ್ಟ" ಎಂದು ಹೇಳಿದ್ದನು (26:14ಡಿ). ಆ ದಿವಸಗಳಲ್ಲಿ ಪ್ರಚಲಿತವಾಗಿದ್ದ ವ್ಯವಸಾಯದ ನಿದರ್ಶನವನ್ನು ಯೇಸು ಬಳಸಿದ್ದನು, ಅದು ಈಗಲೂ ಬೇಸಾಯಗಾರರಲ್ಲಿ ಪ್ರಚಲಿತವಾಗಿದೆ.[1] ಮುಳ್ಳುಗೋಲು ಎನ್ನುವದು ಎಂಟು ಅಡಿಗಳ ಉದ್ದವಿರುವ ಒಂದು ಕೋಲು, ಅದರ ಒಂದು ಕಡೆ ಚೂಪಾದ ಮೊನೆಯಿರುತಿತ್ತು. ಬೇಸಾಯಗಾರನು ನೇಗಿ ಲನ್ನು ಒಂದು ಕೈಯಲ್ಲಿ ಹಿಡಿದು ಊಳುವಾಗ, ಇನ್ನೊಂದು ಕೈಯಲ್ಲಿ ಈ ಕೊಲನ್ನು ಹಿಡಿದಿರುತ್ತಿದ್ದನು. ಮುಳ್ಳುಗೋಲಿನ ಸಹಾಯದಿಂದ ಎತ್ತುಗಳನ್ನು ಎಡ ಬಲಕ್ಕೂ ಮತ್ತು ರಭಸವಾಗಿ ಎಳೆಯುವದಕ್ಕೂ ಬಳಸುತ್ತಿದ್ದನು. ಕೆಲವು ಸಾರಿ ಹತೋಟಿಗೆ ಬಾರದ ಎತ್ತುಗಳು ಬೇಸಾಯಗಾರನಿಗೆ ಒದೆಯುವ ಸಾದ್ಯತೆಯಿತ್ತು, ಆದರೆ ಎತ್ತು ನೀಡಿದ ತೊಂದರೆಗೆ, ಮುಳ್ಳುಗೋಲಿನಿಂದ ಚುಚ್ಚುವುದೇ ಪ್ರತೀಕಾರವಾಗಿತ್ತು - ಅಂತಹ ಮುಳ್ಳುಗೋಲಿಗೆ ವಿರುದ್ಧವಾಗಿ ಒದೆಯುವುದು ಅಪಾಯಕರ ಸಂಗತಿಯಾಗಿತ್ತು!

ಗ್ರೀಕ್ ಮತ್ತು ಲ್ಯಾಟೀನ್ ಜನರು "ಮುಳ್ಳುಗೋಲಿಗೆ ವಿರೋಧವಾಗಿ ಒದೆಯುವದು" ಎಂಬ ಹೇಳಿಕೆಯನ್ನು ಹೊಂದಿರುವವು, ಅವರ "ದೇವತೆಗಳಿಗೆ" ವಿರುದ್ಧವಾಗಿ ಹೋರಾಡುವ ಸಂಗತಿಗೆ ಈ ಹೇಳಿಕೆಯನ್ನು ಬಳಸುತ್ತಿದ್ದರು. ಪೌಲನ ಕುರಿತಾದ ಅಪಾದನೆ ಏನೆಂದರೆ, ಅವನು ಸತ್ಯದೇವರ ಚಿತ್ತಕ್ಕೆ ವಿರುದ್ಧವಾಗಿ ಹೋರಾಡುತ್ತಿದ್ದನು. ಯೆಹೋವನು ಪೌಲನಿಗಾಗಿ ಒಂದು ವಿಶೇಷವಾದ ಮಾರ್ಗವನ್ನು ಸೂಚಸಿದ್ದನು, ಆದರೆ ಅವನು ಅವನ ಜೀವಿತದಲ್ಲಿ ದೇವರು ಇಟ್ಟಿದ್ದ ಯೋಜನೆಗೆ ವಿರುದ್ಧವಾಗಿ ಹೋಗುತ್ತಿದ್ದನು - ಅವನು ಬಹಳ ಕಠಿಣವಾಗಿದ್ದನು!

ದೇವರು ಅವನನ್ನು "ತಡೆದ"[2] ವಿಚಾರವಾಗಿ ಈ ಪಾಠದಲ್ಲಿ ಗಮನಿಸೋಣ, ಅದರಲ್ಲಿ ಅವನಿಗೆ ಅಚ್ಚರಿ ಉಂಟಾಯಿತು - ಆತ್ಮೀಕ ಸತ್ಯಗಳನ್ನು ಎದುರಿಸುವಾಗ, ಪೌಲನು ಯಾವ ರೀತಿಯಲ್ಲಿ "ಮುಳ್ಳುಗೋಲಿನ ಕಥೆಯನ್ನು" ರಾಜಮನೆತನದ ಕೇಳುಗರಿಗೆ ಯಾವ ರೀತಿಯಲ್ಲಿ ವಿವರಿಸಿದನೆಂದು ನೋಡೋಣ. ಇದನ್ನು ಎಚ್ಚರದಿಂದ ಓದೋಣ: ದೇವರು ಈ ಪಾಠದ ಮೂಲಕ ನಿಮ್ಮನ್ನು ಆಶ್ಚರ್ಯವಾದ ಮಾರ್ಗಕ್ಕೆ ನಡೆಸಿದರೂ (ನೀವು ನಿರೀಕ್ಷಿಸಲಾರದ *ಅಪಾಯವು*) ನೀನು ಇದನ್ನು ಬಯಸದೆ ಇರಬಹುದು!

## ಒಂದು ಸನ್ನಿವೇಶ (25:13-26:1)

ಈಗ ನಾವು ಕೈಸರೈಯಿಂದ ಸನ್ನಿವೇಶವನ್ನು ಪುನರಾಲೋಚಿಸೋಣ. "ಕೆಲವು ದಿವಸಗಳು ಗತಿಸಿದ ನಂತರ ಅಗ್ರಿಪ್ಪ ರಾಜನೂ[3] ಬೆರ್ನಿಕೆ ರಾಣಿಯೂ ಫೆಸ್ತನ ದರ್ಶನ ಮಾಡಿಕೊಳ್ಳುವದಕ್ಕೆ ಕೈಸರೈಯಕ್ಕೆ ಬಂದರು." ಫೆಸ್ತನು ಯುದಾಯ ಸೀಮೆಯ ದೇಶಾಧಿಪತಿಯಾಗಿದ್ದನು (25:13).

ಅಗ್ರಿಪ್ಪನು ಹದಿನೇಳು ವರ್ಷದವನಾಗಿರುವಾಗಲೇ ಅವನ ತಂದೆಯು ಮರಣ ಹೊಂದಿದ್ದನು, ಅದರಿಂದ ಅವನ ತಂದೆಯ ಚಕ್ರಾಧಿಪತ್ಯವನ್ನು ಪೂರ್ಣವಾಗಿ ಅವನಿಗೆ ನೀಡಲಾಗಿರಲಿಲ್ಲ. ಅದರ ಬದಲಾಗಿ ಕೆಲವಾರು ವರ್ಷಗಳ ನಂತರ ಒಂದು ಸಣ್ಣ ಸೀಮೆಯ

ದೊರೆತನವನ್ನು ಅವನಿಗೆ ನೀಡಿದ್ದರು. ಅದು ಪಾಲಿಸ್ತೇನಿನ ಉತ್ತರ ಪ್ರದೇಶವಾಗಿತ್ತು. ವರುಷಗಳು ಉರುಳಿದಂತೆ, ಅವನಿಗೆ ಹೆಚ್ಚಾದ ಪ್ರಾಂತಗಳನ್ನು ನೀಡಲಾಯಿತು, ಆದರೆ ಅವನ ತಂದೆಗೆ ಹೋಲಿಸಿದರೆ, ಅವನ ಅಧಿಕಾರವು ಕ್ಷೀಣಿಸುತ್ತಾ ಬಂದಿತು. ಹೇಗೂ ಅವನು ಯೆಹೂದ್ಯರಲ್ಲಿ ಪ್ರಭಾವಿತನಾಗಿದ್ದನು. ಅವನಲ್ಲಿ ಯೆಹೂದ್ಯ ರಕ್ತವಿತ್ತು, ರೋಮಾಯರು ಅವನಿಗೆ ಯೆರೂಸಲೇಮಿನ ದೇವಾಲಯದ ಉಸ್ತುವಾರಿಯನ್ನು ನೀಡಿದ್ದರು, ಹಾಗೂ ಬೇಕಾದ ಯಾಜಕರುಗಳನ್ನು ನೇಮಿಸುವ ಹಕ್ಕನ್ನೂ ಪಡೆದಿದ್ದನು. ಸಕಲ ವಿಧವಾದ ಕ್ರಿಯಾತ್ಮಕ ಕಾರ್ಯಗಳಿಗೆ, ನಂಬಿಕೆಯನ್ನು ಹೊಂದಿದ್ದರೂ ಲೌಕೀಕ ನಾಯಕನಾಗಿದ್ದನು.

ಅವನು ವಿಚಿತ್ರ ಸ್ವಭಾವದ ಹೆರೋದನಾಗಿದ್ದು, ಸ್ವಾರ್ಥ ತೃಪ್ತಿಗೋಸ್ಕರ ಜೀವಿ ಸುತ್ತಿದ್ದನು. ದುಷ್ಟನಾದ ಇವನು ನಿಯಮ ಬಾಹಿರ ಸಂಗತಿಯಾದ ತನ್ನ ಸಹೋದರಿಯಾದ ಜೂಲಿಯಾ ಬೆರ್ನಿಕೆಯೊಂದಿಗೆ ತೆರೆದ ಪಾಪದ ಜೀವಿತದಲ್ಲಿ ಜೀವಿಸುತ್ತಿದ್ದನು (ಯಾಜಕಕಾಂಡ 18:1-18; 20:11-21). ಪುರಾತನ ಬರಹಗಾರರ ಪ್ರಕಾರ, "ಈ ವಿಧವಾದ ಸಂಬಂಧಗಳು ಯೆಹೂದ್ಯರಲ್ಲೂ ಹಾಗೂ ಅನ್ಯರಲ್ಲೂ ನಿಯಮ ಬಾಹಿರವಾಗಿತ್ತು."[4]

ಬೆರ್ನಿಕೆಯು ಹದಿಮೂರು ವರ್ಷದವಳಾಗಿರುವಾಗ, ತನ್ನ ಚಿಕ್ಕಪ್ಪನನ್ನೇ ಮದುವೆ ಯಾಗಿದ್ದಳು.[5] ಆಕೆಯ ಗಂಡನು ಸತ್ತನಂತರ, ಆಕೆಯ ತನ್ನ ಉಳಿದ ಜೀವಿತವನ್ನು ಕಳೆ ಯುವದಕ್ಕಾಗಿ ಮದುವೆಯಾಗದ ತನ್ನ ಸಹೋದರನ ಆಶ್ರಯಕ್ಕೆ ಬಂದಳು, ಮತ್ತು ಅವನ ರಾಣಿಯಾಗಿ ಕಾರ್ಯ ನಿರ್ವಹಿಸಿ ದಳು.[6] ಒಂದು ಸಂದರ್ಭದಲ್ಲಿ, ಅವಳು ಪುನಃ ಮದುವೆ ಯಾದಳು - ಅದೇ ವಿಧವಾಗಿ ಮುಂದುವರಿದು ಈ ವಿಷಯದಲ್ಲಿ ಇದ್ದ ಗುಮಾನಿಯನ್ನು ಊರ್ಜಿತಗೊಳಿಸಿದಳು - ಆದರೆ ಅವಳು ಅಗ್ರಿಪ್ಪನಿಂದ ದೂರವಿರಲು ಸಾಧ್ಯವಾಗಲಿಲ್ಲ. ಆಕೆ ಬೇಗನೆ ತನ್ನ ಗಂಡನನ್ನು ತ್ಯಜಿಸಿ, ತನ್ನ ಸಹೋದರನ ಬಳಿಗೆ ಹಿಂದಿರುಗಿದಳು.[7]

ಕರ್ತನ ಹಾದಿಗೆ ಹಿಂದಿರುಗುವಂತೆ ಮಾಡಲು ಮುಳ್ಳುಗೋಲಿನ ಶಿಕ್ಷೆಯನ್ನು ಹೊಂದ ಬೇಕಾದವರ ಪಟ್ಟಿಯಲ್ಲಿ, ಅಗ್ರಿಪ್ಪ ಮತ್ತು ಬೆರ್ನಿಕೆಯರು ಮೊದಲಿಗರಾಗಿದ್ದರು! "ಅವರು ಅನೇಕ ದಿವಸ ಅಲ್ಲಿ ನಿಂತಿರಲಾಗಿ ಫೆಸ್ತನು ಪೌಲನ ಸಂಗತಿಯನ್ನು ರಾಜನಿಗೆ ತಿಳಿಸಿದನು ..." (ವಚನ 14), ಇಂಥ ವಿಚಾರಗಳನ್ನು ಹೇಗೆ ವಿಚಾರಣೆ ಮಾಡಬೇಕು ಎಂಬುದನ್ನು ಅವನು ಅರಿಯದವನಾಗಿದ್ದನು (ವಚನ 20). ಅದಕ್ಕೆ ಅಗ್ರಿಪ್ಪನು - ಆ ಮನುಷ್ಯನು ಹೇಳಿ ಕೊಳ್ಳುವದನ್ನು ಕೇಳುವದಕ್ಕೆ ನನಗೂ ಮನಸ್ಸುಂಟು ಅಂದನು (ವಚನ 22).

ಅರಮನೆಯಲ್ಲಿ ಬಂದು ಇಳುಕೊಂಡಿದ್ದ ಇಬ್ಬರು ಹೆರೋದ ಮನೆತನದವರು ಬಂದಿರುವ ರೆಂಬ ಸುದ್ದಿಯನ್ನು ಪೌಲನು ತಿಳಿದನು. ಅವನ ತಲೆಯನ್ನು ಕಡಿದು ಹಾಕುವದಕ್ಕಾಗಿ ಅವರು ಸಿದ್ಧರಾಗಿದ್ದರು ಎಂಬ ವಿಷಯವನ್ನು ಕೇಳುವದಕ್ಕೆ ಅವನಿಗೆ ಆಶ್ಚರ್ಯ ಉಂಟಾಗಿರಬಹುದು (ಮತ್ತಾಯ 14:3-12 ನೋಡಿರಿ), ಆದರೆ ಅಗ್ರಿಪ್ಪನು ಅವನ ಮಾತನ್ನು ಕೇಳಲಪೇಕ್ಷಿಸಿದ ಸಂಗತಿಯನ್ನು ತಿಳಿದು ಅಚ್ಚರಿಗೊಂಡನು! ಪೌಲನ ಆನಂದದ ಕುರಿತು J. W. ಮೆಕ್ ಗಾರ್ವೆಯವರು:

> ರಕ್ತಸುರಿಸಿದ ಹಾಗೂ ಕ್ರಿಸ್ತನಿಗೂ ನಡುವೆ, ಇಂಥಾ ಒಂದು ಸತ್ಯವನ್ನು ಆಲಿಸುವ ಸಂಬಂಧವು ಉಂಟಾದದ್ದು ಸತ್ಯವೇ? ಆ ಹೆರೋದನನ್ನು ಕ್ರಿಸ್ತನಿಗಾಗಿ ಗೆದ್ದುಕೊಳ್ಳುವ ಅಂಶವು ಪೌಲನಿಗೆ ಆಶ್ಚರ್ಯ ಉಂಟುಮಾಡಿತ್ತು.[8]

ಒಂದು ವೇಳೆ ಆ ರಾತ್ರಿ ಪೌಲನಿಗೆ ಹೆಚ್ಚು ನಿದ್ರೆ ಬಾರದೆ ಇರಬಹುದು. ಅಂತಿಮವಾಗಿ ಅಗ್ರಿಪ್ಪನನ್ನು ಪರಿವರ್ತನೆಗೊಳಿಸುವ ಮುಂಜಾನೆಯು ಉಂಟಾಯಿತು!

> ಮರುದಿನ ಅಗ್ರಿಪ್ಪರಾಜನೂ ಬೆರ್ನಿಕೆ ರಾಣಿಯೂ ಬಹು ಆಡಂಬರದಿಂದ ಬಂದು ಸಹಸ್ರಾಧಿಪತಿಗಳ ಮತ್ತು ಪಟ್ಟಣದ ಮುಖಂಡರ ಸಂಗಡ ಸಭಾಸ್ಥಾನದೊಳಗೆ ಸೇರಿ

ದಾಗ ಫೆಸ್ತನು ಅಪ್ಪಣೆ ಕೊಡಲು ಪೌಲನನ್ನು ಕರತಂದರು (25:23).

ಫೆಸ್ತನು ಅಪ್ಪಣೆ ಪಡಂದು ಕಾರ್ಯಕ್ರಮದ ನಡಾವಳಿಯನ್ನು ಆರಂಭಿಸಿದನು:

> ... ಆಗ ಫೆಸ್ತನು - ಅಗ್ರಿಪ್ಪರಾಜನೇ, ನಮ್ಮ ಸಂಗಡ ಕೂಡಿಬಂದಿರುವ ಎಲ್ಲಾ ಜನರೇ,[9] ಈ ಮನುಷ್ಯನನ್ನು ನೋಡುತ್ತೀರಲ್ಲಾ, ಇವನ ವಿಷಯದಲ್ಲಿ ಯೆಹೂದ್ಯ ರೆಲ್ಲರೂ[10] - ಇವನು ಇನ್ನು ಮೇಲೆ ಬದುಕಬಾರದೆಂದು ಕೂಗುತ್ತಾ ಯೆರೂಸಲೇಮಿನಲ್ಲಿಯೂ ಇಲ್ಲಿಯೂ ನನ್ನನ್ನು ಬೇಡಿಕೊಂಡರು.[11] ಇವನು ಮರಣ ದಂಡನೆಗೆ ಕಾರಣವಾದದ್ದೇನೂ ಮಾಡಲಿಲ್ಲವೆಂದು ನನಗೆ ಕಂಡುಬಂತು. ತಾನೇ ಚಕ್ರವರ್ತಿಗೆ ವಿಜ್ಞಾಪನೆ ಮಾಡಿಕೊಂಡದ್ದರಿಂದ ಇವನನ್ನು ಕಳುಹಿಸುವದಕ್ಕೆ ತೀರ್ಮಾನಿಸಿದೆನು. ಇವನ ವಿಷಯದಲ್ಲಿ ಮಹಾ ಸನ್ನಿಧಾನಕ್ಕೆ ಬರೆಯುವದಕ್ಕೆ ನಿಶ್ಚಯವಾದದ್ದೇನೂ ಇಲ್ಲ.[12] ಸೆರೆಯವನ ಮೇಲೆ ಆರೋಪಿಸಿರುವ ದೋಷಗಳನ್ನು ಸೂಚಿಸದೆ ಅವನನ್ನು ಕಳುಹಿಸುವದು ಯುಕ್ತವಲ್ಲವೆಂದು ನನಗೆ ತೋರುತ್ತದೆ. ಆದದರಿಂದ ವಿಚಾರಣೆಯಾದ ಮೇಲೆ ಬರೆಯುದಕ್ಕೆ ಏನಾದರೂ ಸಿಕ್ಕೀತೆಂದು ಇವನನ್ನು ನಿಮ್ಮ ಮುಂದೆ ಮುಖ್ಯವಾಗಿ ಅಗ್ರಿಪ್ಪರಾಜನೇ ನಿನ್ನ ಮುಂದೆ ಕರೆಯಿಸಿದ್ದೇನೆ ಅಂದನು (ವಚನಗಳು 24-27).

ಪೌಲನು ಮರಣಕ್ಕೆ ಯೋಗ್ಯವಾದ ಯಾವುದೇ ಅಪರಾಧವನ್ನು ಮಾಡದೆ ಇದ್ದದ್ದರಿಂದ “ಅವನನ್ನು ಬಿಡುಗಡೆ ಮಾಡದೆ ಇದ್ದದ್ದು ಅಸಂಬದ್ಧವಾದ ವಿಷಯವಾಗಿತ್ತು”![13]

ಈಗಿನ ಸಮಯವು ವಿಚಾರಣೆಯ ಸನ್ನಿವೇಶವಾಗದೆ, ಅಗ್ರಿಪ್ಪನು ಪೌಲನ ಪ್ರಸಂಗವನ್ನು ಆಲಿಸಲು ಬಯಸಿದ್ದರಿಂದ, ಅನೌಪಚಾರಿಕೆಯ ಸಮಯವಾಗಿತ್ತು, ಹಾಗೂ ಅಗ್ರಿಪ್ಪನು ಪೌಲನಿಗೆ ಸಂದರ್ಶನ ಮಾಡಲು ಫೆಸ್ತನು ಅನುವು ಮಾಡಿಕೊಟ್ಟನು. “ಆಗ ಅಗ್ರಿಪ್ಪನು ಪೌಲನಿಗೆ ನೀನು ನಿನ್ನ ಪಕ್ಷದಲ್ಲಿ ಮಾತಾಡಬಹುದು ಅಂದನು” (26:1ಎ).

## ಪ್ರಸಂಗ (26:1-23)

ಪೌಲನು ವೈಭವವುಳ್ಳ ಸಭೀಕರ ಮುಂದೆ ನಿಂತು, ಲೌಕೀಕ ಜನರ ಆಲೋಚನೆ ಯಂತೆ ಅವರೊಂದಿಗೆ ಮಾತನಾಡಿದನು. ನಾನಾಗಿದ್ದರೆ, ನನ್ನ ಪಾದರಕ್ಷೆಯಲ್ಲಿ ನಡುಕ ಉಂಟಾಗುತ್ತಿತ್ತು. ಆದರೆ ಅವನು ಧೈರ್ಯವಾಗಿ ನಿಂತಿದ್ದನು. “ಅವನು ಪವಿತ್ರಾತ್ಮನ ಮೂಲಕ ಧೈರ್ಯಗೊಂಡನು” ಎಂದು ವೆಸ್ಟರ್ನ್ ಟೆಕ್ಸ್ ತಿಳಿಸುತ್ತದೆ. ನಂತರ ಪೌಲನು ಕೈಯೆತ್ತಿ[14] ಪ್ರತಿವಾದ ಮಾಡಿದನು (ಅಪೊಸ್ತಲರ ಕೃತ್ಯಗಳು 26:1ಬಿ).[15]

ಅರಸನ ಮುಂದೆ ಪೌಲನಿಗೆ ಪ್ರತಿವಾದ ಮಾಡಲು ದೊರಕಿದ ಅವಕಾಶಕ್ಕಾಗಿ ಅವನು ಸಂತಸಗೊಂಡನು:

> ಅಗ್ರಿಪ್ಪರಾಜನೇ, ಯೆಹೂದ್ಯರು ನನ್ನಮೇಲೆ ಆರೋಪಿಸುವ ಎಲ್ಲಾ ದೋಷಗಳ ವಿಷಯವಾಗಿ ನಿನ್ನ ಎದುರಿನಲ್ಲಿ ನಾನು ಈಹೊತ್ತು ಪ್ರತಿವಾದ ಮಾಡಬೇಕಾಗಿರುವದರಿಂದ ನನ್ನನ್ನು ಧನ್ಯನೆಂದು ಎಣಿಸಿಕೊಳ್ಳುತ್ತೇನೆ. ಯಾಕಂದರೆ ಯೆಹೂದ್ಯರಲ್ಲಿರುವ ಎಲ್ಲಾ ಆಚಾರಗಳನ್ನೂ ವಿವಾದಗಳನ್ನೂ ನೀನು ಚೆನ್ನಾಗಿ ಬಲ್ಲವನಾಗಿರುತ್ತೀ.[16] ನನ್ನ ಮಾತುಗಳನ್ನು ಸಹನದಿಂದ ಕೇಳಬೇಕೆಂದು ಬೇಡಿ ಕೊಳ್ಳುತ್ತೇನೆ[17] (ವಚನಗಳು 2, 3).

ಪೌಲನು ತನ್ನ ವಿಷಯವನ್ನು ಅರ್ಥಮಾಡಿಕೊಂಡಂಥ ಹಾಗೂ ಅವನ ಪರಿಸ್ಥಿತಿಯನ್ನು ತಿಳಿದ ಅಗ್ರಿಪ್ಪನ ಮುಂದೆ ನಿಂತುಕೊಂಡದ್ದರಿಂದ ಸಂತಸಗೊಂಡನು. (ಪೌಲನು ಬಡಾಯಿಕೊಚ್ಚುವದರಲ್ಲಿ ನಿರತನಾಗಲಿಲ್ಲ; ಅಗ್ರಿಪ್ಪನು ಯುದಾಯದವರ ಸಂಸ್ಕೃತಿಯನ್ನು ತಿಳಿದಿದ್ದನು ಎಂದು ಪುರಾತನ ಬರವಣಿಗೆಯಲ್ಲಿದೆ.)

ಅರಸನ ಮುಂದೆ ನಿಂತುಕೊಳ್ಳಲು ಅವಕಾಶವಾದದ್ದರಿಂದ, ಪೌಲನು ತನ್ನ ಆನಂದವನ್ನು ಗೌಪ್ಯವಾಗಿಟ್ಟಿದ್ದನು: ಪೂರ್ಣ ಹೃದಯದಿಂದ ಅರಸನನ್ನು ಪರಿವರ್ತಿಸಲು ಆಶಿಸಿದ್ದನು! ಅಗ್ರಿಪ್ಪನನ್ನು ಪರಿವರ್ತಿಸುವದೇ? ನಿಯಮವಿಲ್ಲದವನಾದ ಹೇರೋದನನ್ನು ಪರಿವರ್ತಿಸುವದೇ? ನಿಜವಾಗಿಯೂ ಆ ದುಷ್ಟನು ರಕ್ಷಣೆಗೆ ಯೋಗ್ಯನಾಗಿರಲಿಲ್ಲ! ಎಂಬುದನ್ನು ಪೌಲನು ಈ ವಿಧವಾಗಿ ಯೋಚಿಸಲಿಲ್ಲ (2 ಪೇತ್ರ 3:9)!

ಪೌಲನ ಶ್ರೋತೃಗಳು ಅಂದರೆ; ಅಗ್ರಿಪ್ಪನೊಬ್ಬನೇ ಆಗಿದ್ದನು.[18] ಇಲ್ಲಿರುವಂಥ ಪ್ರಸಂಗದಂತೆ, ಅಪೊಸ್ತಲರ ಕೃತ್ಯದಲ್ಲಿನ ಇತರೆ ಯಾವುದೇ ಪ್ರಸಂಗವು ಇಷ್ಟು ವೈಯಕ್ತಿಕವಾಗಿರಲಿಲ್ಲ. ಪೌಲನು ಅಗ್ರಿಪ್ಪನ ಕುರಿತು ಪದೇ ಪದೇ, ಅವನ ಹೆಸರನ್ನು ಅವನ ನಾಮಾಂಕಿತವನ್ನು ಅವನ ಸರ್ವನಾಮ ಹಾಗೂ "ನೀನು" ಎಂದು ಪ್ರಾಯೋಗಿಸಿದನು (ವಚನಗಳು 2, 3, 7, 13, 19, 26, 27). ಪೌಲನ ಪ್ರಸಂಗದ ಹಿಂದಿನ ಪ್ರಚೋದನೆಗಳನ್ನು ಈ ಇಬ್ಬರ ಮುಖಾಮುಖಿ ಸಂದರ್ಶನದಲ್ಲಿ ಗಮನಿಸಿರಿ: ಬೇಡಿಗಳಲ್ಲಿರುವ ವೃದ್ಧನು, ರಾಜವಸ್ತ್ರ ಧರಿಸಿದ್ಧ ಯೌವನಸ್ಥನು; ಆನಂದ ಭರಿತವಾದ ಪ್ರಸಂಗಿ, ಖಾಲಿಯಾದ ತಪ್ಪಿ ಹೋದ ಮಗನು; ಪ್ರಯಾಣದ ಅಂತ್ಯದಲ್ಲಿದ್ದವನೊಬ್ಬನು, ಇನ್ನೊಬ್ಬನು ಆರಂಭದಲ್ಲಿದ್ದವನು. ಪ್ರಾಯಶಃ ಪೌಲನು ತನ್ನಲ್ಲಿದ್ದ ಹಿಂದಿನ ಜೀವಿತವನ್ನು ಅಗ್ರಿಪ್ಪನಲ್ಲಿ ಕಂಡನು: ಯೌವನಸ್ತನು, ಐಶ್ವರ್ಯವಂತನೂ, ಬಲವಾದ ತಲೆಯನ್ನು ಹೊಂದಿದವನೂ, ಸಾಮರ್ಥ್ಯವುಳ್ಳವನಾಗಿದ್ದರೂ, ತಪ್ಪಾದ ಮಾರ್ಗದಲ್ಲಿ ಚಲಿಸುವವನೂ ಆಗಿದ್ದನು; ನಿಯಮಗಳನ್ನು ಅರಿತ್ತಿದ್ದರೂ, ಅದರ ಉದ್ದೇಶವನ್ನು ಅರಿಯುವದನು; ಪರಿಶೀಲನೆ ಮಾಡದೆ ಕ್ರೈಸ್ತತ್ವವನ್ನು ವಿರೋಧಿಸಿದವನು ಆಗಿದ್ದನು. ಪೌಲನು ಪರಿವರ್ತನೆಗೊಂಡಾಗ, ಇದ್ದಂತ ವಯಸ್ಸಿನವನು ಅಗ್ರಿಪ್ಪನಾಗಿರಬಹುದೇ ಎಂಬ ಪ್ರಶ್ನೆಯನ್ನು ಪೌಲನು ಹೊಂದಿದ್ದನೇ?[19] ಎಂಬುದನ್ನು ನಾನು ಅರಿಯೆನು, ಆದರೆ ಒಂದನ್ನು ಅರಿತಿರುವೆನು: ದಿನದ ಅಂತ್ಯದಲ್ಲಿ ಪೌಲನು ಬಯಸಿದಂತೆ ನಡೆದಿದ್ದರೆ, ಯೌವನಸ್ಥನಾದ ಅರಸನು ಕ್ರೈಸ್ತನಾಗುವದಕ್ಕೆ ಸಾಧ್ಯವಿತ್ತು (ವಚನಗಳು 28, 29)!

ಮೇಲ್ನೋಟಕ್ಕೆ ಪೌಲನ ಪ್ರತಿವಾದದಲ್ಲಿ ಅನುಭವದ ಚರ್ಚೆ ಉಂಟಾಯಿತು. ಹೇಗೂ ಆತನ ಮಾತುಗಳಿಂದ ಅವನು ತನ್ನನ್ನೇ ಪ್ರತಿಪಾದಿಸಿಕೊಳ್ಳಲಿಲ್ಲ, ಆದರೆ ಪುನರುತ್ಥಾನದ ಕರ್ತನಿಗಾಗಿ ಪ್ರತಿಪಾದನೆ ಮಾಡಿದನು (2 ಕೊರಿಂಥ 4:5 ನೋಡಿರಿ). ಹೇಗಿದ್ದರೂ, ಮೊದಲ ವ್ಯಕ್ತಿಯ ಮೊದಲ ಹೇಳಿಕೆಯಲ್ಲಿ ಅವನ ಮಾತಿನ ಸಾರಾಂಶವನ್ನು ನೋಡುತ್ತೇವೆ:[20]

### "ನಾನು ಫರಿಸಾಯನ ಹಾಗೆ ಜೀವಿಸಿದ್ದೆನು" (26:4-11)

26:4, 5ರಲ್ಲಿ ಪೌಲನು ಯೌವನಸ್ಥನಾಗಿರುವಾಗ, ಹೊಂದಿದ್ದ ಯೆಹೂದ್ಯ ನಂಬಿಕೆಯ ಬಗ್ಗೆ ಮಾತನಾಡಿದನು. "ಇವನ ವಿಷಯದಲ್ಲಿ ಯೆಹೂದ್ಯರೆಲ್ಲರು ಇವನನ್ನು ಖಂಡಿಸಿರುವರು ಎಂದು ಫೆಸ್ತನು ಹೇಳಿದನು" (25:24). ಪೌಲನು ಈ ಹೇಳಿಕೆಗೆ ವಿರುದ್ಧವಾಗಿ, ಒಂದು ವೇಳೆ, ಯೆಹೂದ್ಯರೆಲ್ಲರೂ ಸತ್ಯವನ್ನೇ ಹೇಳಿರುವುದಾದರೇ, ಅವನನ್ನು ಖಂಡಿಸುವ ಬದಲು ಅವನು ನೇಮಕ ಮಾಡಬೇಕಿತ್ತು ಎಂದು ಪ್ರತಿವಾದ ಮಾಡಿದನು.

> ನಾನು ಮೊದಲಿನಿಂದಲೂ ಯೆರೂಸಲೇಮಿನಲ್ಲಿ ನನ್ನ ದೇಶದ ಜನರೊಳಗಿದ್ದುಕೊಂಡು ಬಾಲ್ಯದಿಂದ ಬದುಕಿದ ಬಗೆಯು ಎಲ್ಲಾ ಯೆಹೂದ್ಯರಿಗೆ ತಿಳಿದೇ ಅದೆ; ನಮ್ಮ ಧರ್ಮದಲ್ಲಿ[21] ಬಹು ಖಂಡಿತವಾದ ಮತವನ್ನನುಸರಿಸಿ ಫರಿಸಾಯನಾಗಿ ನಡಕೊಂಡೆನೆಂದು ಪ್ರಾರಂಭದಿಂದಲೂ ಅವರು ಬಲ್ಲರು; ಸಾಕ್ಷಿ ಹೇಳುವದಕ್ಕೆ ಅವರಿಗೆ ಮನಸ್ಸಿದ್ದರೆ ಹೇಳಬಹುದು (26:4, 5).[22]

ಪೌಲನು ತನ್ನ ಪ್ರತಿಪಾದನೆಯಲ್ಲಿ, ತನ್ನ ಮೇಲೆ ಮಾಡಿದ ಅಪಾದನೆಗಳ ಕುರಿತು ನೇರವಾದ ಅರೋಪ ಮಾಡದೇ; ಅವನು ಯೆಹೂದ್ಯರನ್ನು ಯಾವುದೇ ವಿಧದಲ್ಲಿ ತಪ್ಪಾಗಿ

ನಡೆಸಿಕೊಳ್ಳಲಿಲ್ಲ ಧರ್ಮಶಾಸ್ತ್ರವನ್ನು ಅವ ಹೇಳನ ಪ್ರಕಾರ ಮಾಡಲಿಲ್ಲವೆಂದು, ಅಥವಾ ದೇವಾಲಯವನ್ನು ಹೊಲೆ ಮಾಡಲಿಲ್ಲವೆಂದು ಒತ್ತಿ ಹೇಳಿದನು. ಅವನನ್ನು ಫಲಿಸಾಯನೆಂದು ಗುರುತಿಸಿಕೊಂಡು, ಪೂರ್ವಜರ ಉದ್ದೇಶ, ಹಾಗೂ ಪುನರುತ್ಥಾನದ ಅಂಶವನ್ನು ತಿಳಿಸಿ, ಒಬ್ಬ ಫಲಿಸಾಯನು ವಾಕ್ಯದ ವಾಗ್ದಾನವನ್ನು ಹಾಗೂ ಸತ್ತವರ ಪುನರುತ್ಥಾನವನ್ನು ನಂಬಿದವನೆಂದು ತಿಳಿಸಿದನು (23:6, 8).

> ಈಗಲೂ ದೇವರು ನಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವು ನೆರವೇರುವದೆಂಬ ನಿರೀಕ್ಷೆಯನ್ನು ಕುರಿತೇ ವಿಚಾರಿಸಲ್ಪಡುವವನಾಗಿ ಇಲ್ಲಿ ನಿಂತಿದ್ದೇನೆ. ನಮ್ಮ ಹನ್ನೆರಡು ಕುಲದವರು[23] ಹಗಲಿರುಳು ಆಸಕ್ತಿಯಿಂದ ದೇವರನ್ನು ಸೇವಿಸುತ್ತಾ ಆ ವಾಗ್ದಾನದ ಫಲವನ್ನು ಹೊಂದುವದಕ್ಕೆ ನಿರೀಕ್ಷಿಸುತ್ತಾ ಇದ್ದಾರೆ ರಾಜಾ, ಆ ನಿರೀಕ್ಷೆಯ ವಿಷಯದಲ್ಲಿಯೇ ಯೆಹೂದ್ಯರು ನನ್ನ ಮೇಲೆ ದೋಷಾರೋಪಣೆ ಮಾಡುತ್ತಾರೆ (ವಚನಗಳು 6, 7).

ಅನೇಕರಾದ ಯೆಹೂದ್ಯರು ನಂಬಿದ್ದ ವಿಷಯಗಳ ಕಾರಣದಿಂದಲೇ ಪೌಲನು ವಿಚಾರಣೆಗೆ ಒಳಪಟ್ಟಿದ್ದನೆಂದು ಪೌಲನು ನಿರೂಪಿಸಿದ್ದನು. ದೇವರು ಅವನ ಪೂರ್ವಿಕರೊಂದಿಗೆ ನಿರೀಕ್ಷೆಯ ವಾಗ್ದಾನ ಮಾಡಿ ಮುಂಬರುವ ಮೆಸ್ಸೀಯನ ಕುರಿತು ತಿಳಿಸಿದ್ದನು,[24] ಆತನು ಅಬ್ರಹಾಮನ "ಸಂತತಿಯವನಾಗ್ದಿನು" (ಆದಿಕಾಂಡ 12:3; 22:18; ಗಲಾತ್ಯ 3:16, 19 ನೋಡಿರಿ). ಕಾಲಾಂತರದಲ್ಲಿ, ಆ "ನಿರೀಕ್ಷೆಯು" ವಿಸ್ತಾರಗೊಂಡಿತು. ಹೊಸ ಒಡಂಬಡಿಕೆಯ ಸಮಯದಲ್ಲಿ, ಇಸ್ರಾಯೇಲ್ಯರ ಪುನಸ್ಥಾಪನೆಯ ಕುರಿತಾದ ನಿರೀಕ್ಷೆಯನ್ನು ಯೆಹೂದ್ಯರು ನಿರೀಕ್ಷಿಸಿದ್ದನು, ಅದನ್ನು ಮೆಸ್ಸೀಯನು ಸಾಭೀತುಪಡಿಸುವನೆಂದು ನಂಬಿದ್ದರು (ಲೂಕ 1:67-79; ಅಪೊಸ್ತಲರ ಕೃತ್ಯಗಳು 3:20, 21).

ನಿರೀಕ್ಷೆಯು ಪುನಶ್ಚೇತನವು, ಪುನರುತ್ಥಾನದ ನಿರೀಕ್ಷೆಯನ್ನು ಒಳಗೊಂಡಿತ್ತು (ಲೂಕ 7:18-23).[25] ದಾನಿಯೇಲ 12:2ರಲ್ಲಿ, "ದೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯ ಜೀವವನ್ನು ಕೆಲವರು ನಿಂದನ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು."[26] ಲಾಜರನು ಮರಣಹೊಂದಿದಾಗ, ಸಾಮಾನ್ಯವಾದ ಯೆಹೂದ್ಯನ ಸಮಾಲೋಚನೆಯಂತೆ ಮಾರ್ಥಳು ಯೋಚಿಸಿದಳು: "ಸತ್ತವರಿಗೆ ಕಡೇ ದಿನದಲ್ಲಿ ಪುನರುತ್ಥಾನವಾಗುವದು ಎಂದು ನಂಬಿದ್ದಳು" (ಯೋಹಾನ 11:24ಬಿ).

ಧರ್ಮಶಾಸ್ತ್ರವನ್ನು ಹಾಗೂ ಪ್ರವಾದಿಗಳನ್ನು[27] ನಂಬಿದ್ದ ಸಾಮಾನ್ಯರಾದ ಯೆಹೂದ್ಯರಿಗೂ ಮತ್ತು ಫಲಿಸಾಯರಿಗೂ ಪುನರುತ್ಥಾನದ ನಿರೀಕ್ಷೆಯೇ ಮೂಲವಾಗಿತ್ತು. ಅವರುಗಳು ನಂಬಿದ್ದ ವಿಚಾರವನ್ನೆ ಪೌಲನು ಪ್ರಸಂಗ ಮಾಡಿದ್ದನ್ನು ಕಾರಣವಾಗಿರಿಸಿ ಅವನನ್ನು ವಿಚಾರಣೆ ಮಾಡಿದ್ದ ವಿಷಯದಲ್ಲಿ ಪೌಲನು ತಿಳಿಯದಾದನು: ದೇವರು ಒಬ್ಬನನ್ನು ಮರಣದಿಂದ ಎಬ್ಬಿಸಿದನು. ಅವನ ಸ್ವರದಲ್ಲಿದ್ದ ಆಶ್ಚರ್ಯವನ್ನು ಗಮನಿಸಿ, "ರಾಜ, ಅ ನಿರೀಕ್ಷೆಯ ವಿಷಯದಲ್ಲಿಯೇ ಯೆಹೂದ್ಯರು ನನ್ನ ಮೇಲೆ ದೋಷಾರೋಪಣೆ ಮಾಡುತ್ತಾರೆ" (ವಚನ 7ಬಿ)! ಆ ಹೇಳಿಕೆ ಯಲ್ಲಿನ ಪೌಲನ ವಾಕ್ಯಗಳ: "ಎಲ್ಲಾ ಜನರಿಗೂ, ಯೆಹೂದ್ಯರಿಂದ"[28] ಎಂದು F. F. ಬ್ರೂಸ್‌ರವರು ತಿಳಿಸಿರುವರು.

ಉತ್ತೇಜನಗೊಂಡ, ಪೌಲನು ಶೊತ್ರುಗಳ ಕಡೆ ತಿರುಗಿಕೊಂಡು, "ದೇವರು ಸತ್ತವರನ್ನು ಎಬ್ಬಿಸಿದ್ದು ನಂಬತಕ್ಕದಲ್ಲವೆಂದು ನೀವು[29] ಯಾಕೆ ತೀರ್ಮಾನಿಸುತ್ತೀರಿ?" (ವಚನ 8). ಪೌಲನು ತನ್ನ ಬಾಯಿಂದ ಮಾತನಾಡಿದ ಚುಚ್ಚು ನುಡಿಯಿಂದ ಪ್ರಾಯಶಃ ಅನೇಕರು ಪುಳಕಿತರಾಗಿರಬಹುದು.

ಅಲ್ಲಿದ್ದವರಿಗೆಲ್ಲಾ, ಪೌಲನು ಸಮಂಜಸವಾದ ಮಾತುಗಳನ್ನೇ ಆಡಿದನು. ಅನ್ಯರಲ್ಲಿ ಅನೇಕರು ಶಕ್ತಿಯುಳ್ಳ ದೇವರಲ್ಲಿ (ಅಥವಾ ದೇವತೆಗಳಲ್ಲಿ) ನಂಬಿಕೆಯಿಟ್ಟಿದ್ದರು, ಆತನೇ

ಸೃಷ್ಟಿಕರ್ತನಾಗಿದ್ದನು (17:24, 25); ಒಂದು ವೇಳೆ ದೇವರು ಲೋಕವನ್ನೇ ಸೃಷ್ಟಿಸಿರುವದಾದರೆ, ಆತನು ಸತ್ತವರನ್ನು ಎಬ್ಬಿಸುವನೆಂಬ ಸಂಗತಿಯನ್ನು ಏಕೆ ತಿಳಿಯಲಾರರು? ಅವನ ಮಾತುಗಳು ಮುಖ್ಯವಾಗಿ, ಅಲ್ಲಿ ನೆರೆದಿದ್ದ ಯೆಹೂದ್ಯರಿಗೆ ಸಂಬಂಧಪಟ್ಟದ್ದಾಗಿತ್ತು. (ಅದರಲ್ಲಿ ಅಗ್ರಿಪ್ಪನೂ ಒಳಗೊಂಡಿದ್ದನು): ದೇವರು ಇತರರನ್ನು ಮರಣದಿಂದ ಎಬ್ಬಿಸಿರುವಾಗ, ದೇವರು ಯೇಸುವನ್ನು ಎಬ್ಬಿಸಿದನೆಂಬ ವಿಷಯದಲ್ಲಿ ಅವರಿಗೆ ಸಂದೇಹವೇಕೆ? ಆದಾಗ್ಯೂ ಮಿತಿವಾದ ಆಲೋಚನೆ ಇರುವವರಿಗೆ ಈ ವಿಷಯವು ಅಘೋಚರವೇ, ಏಕೆಂದರೆ ಅವರು ತಮ್ಮದೇ ಆದ ಕಾರಣಗಳನ್ನು ಹೊಂದಿರುವರು, ತಮ್ಮನೇ ಅವಲಂಭಿಸಿಕೊಂಡಿರುವರು.

ಆ ಒಂದು ಸಭೆಗೆ ಸವಾಲನ್ನು ನೀಡಿದ ನಂತರ, ಒಂದು ಕಾಲದಲ್ಲಿ ಅವನೂ ಸಹ ಅವರಂತೆಯೇ ಇದ್ದವನು ಎಂದು ಪೌಲನು ತಿಳಿಸಿದನು. ಅವನು ಫರಿಸಾಯನಾದ್ದರಿಂದ ಕಲ್ಪನಾ ವಿಚಾರದಲ್ಲಿ ಸತ್ತವರ ಪುನರುತ್ಥಾನವನ್ನು ತಿಳಿದಿದ್ದರೂ, ಯೇಸು ಮರಣದಿಂದ ಎದ್ದು ಬಂದಿರುವ ಸಾಧ್ಯತೆಯನ್ನು ತಿರಸ್ಕರಿಸಿದ್ದನು:

> ನಜರೇತಿನ ಯೇಸುವಿನ ಹೆಸರಿಗೆ[30] ವಿರುದ್ಧವಾಗಿ ಅನೇಕ ಕಾರ್ಯಗಳನ್ನು ನಡಿಸಬೇಕೆಂದು ನಾನು ಯೋಚಿಸಿಕೊಂಡಿದ್ದೆನು. ಯೆರೂಸಲೇಮಿನಲ್ಲಿ ಹಾಗೆಯೇ ನಡಿಸಿದೆನು.[31] ಮಹಾಯಾಜಕರಿಂದ ಅಧಿಕಾರವನ್ನು ಪಡೆದು ದೇವಜನರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಇಡಿಸಿ ಅವರಿಗೆ ಮರಣದ ತೀರ್ಪಾದಾಗ ನನ್ನ ಸಮ್ಮತಿಯನ್ನು ಸೂಚಿಸಿದೆನು. ಎಲ್ಲಾ ಸಭಾಮಂದಿರಗಳಲ್ಲಿಯೂ ನಾನು ಅನೇಕಾವರ್ತಿ ಅವರನ್ನು ದಂಡಿಸಿ ಅವರಿಂದ ದೂಷಣೆಯ ಮಾತುಗಳನ್ನಾಡಿಸುವದಕ್ಕೆ ಪ್ರಯತ್ನಿಸಿದೆನು.[32] ಇದಲ್ಲದೆ ಅವರ ಮೇಲೆ ಬಹು ಕೋಪಾವೇಶವುಳ್ಳವನಾಗಿ ಪರಪಟ್ಟಣಗಳ ತನಕ ಅವರನ್ನು ಹಿಂಸೆಪಡಿಸಿದೆನು (26:9-11).[33]

ಒಂದು ಕಾಲದಲ್ಲಿ ಪೌಲನು ಸಹ ಕ್ರೈಸ್ತರ ದ್ವೇಷಿಯಾಗಿದದ್ದನ್ನು ತಿಳಿದು, ಅಗ್ರಿಪ್ಪನು ಅಚ್ಚರಿಗೊಂಡನು. ಪೌಲನು ಈ ವಿಚಾರದಲ್ಲಿ ಅತಿ ಆಸಕ್ತಿವುಳ್ಳವನಾಗಿದ್ದನು ಎಂದು ತಿಳಿದನು. ಪೌಲನ ಮಾತುಗಳು, "ಆಶ್ಚರ್ಯಗೊಂಡ ಯೌವನಸ್ತನಲ್ಲಿ ಪ್ರಶ್ನೆಯನ್ನು ಉಂಟುಮಾಡಿ: ಈ ಕ್ರೈಸ್ತ ಹಿಂಸಕನು, ಇಂಥಾ ಒಂದು ಮಹತ್ವದ ಬದಲಾವಣೆಯನ್ನು ಹೇಗೆ ಹೊಂದಿದನು? ಎಂದು ತಿಳಿದನು."[34]

### "ನಾನು ಒಂದು ಬೆಳಕನ್ನು ಕಂಡೆನು" (26:12-18)

ಪೌಲನು ತನ್ನಲ್ಲಿ ಅತಿಶಯೋಕ್ತಿಯಾದ ಬದಲಾವಣೆಯ ಕುರಿತು ಅಗ್ರಿಪ್ಪನಿಗೆ ಹೇಳಿದನು:

> ಈ ಉದ್ದೇಶದಿಂದ ನಾನು ಮಹಾಯಾಜಕರಿಂದ ಅಧಿಕಾರವನ್ನೂ ಉದ್ಯೋಗವನ್ನೂ ಹೊಂದಿ ದಮಸ್ಕಕ್ಕೆ ಹೋಗುತ್ತಾ ನಾನು ದಾರಿಯಲ್ಲಿದ್ದಾಗ ರಾಜನೇ, ಮಧ್ಯಾಹ್ನದ ಹೊತ್ತಿನಲ್ಲಿ ಪರಲೋಕದಿಂದಾದ ಒಂದು ಬೆಳಕು ನನ್ನ ಸುತ್ತಲೂ ನನ್ನ ಜೊತೆಯಲ್ಲಿ ಪ್ರಯಾಣಮಾಡುತ್ತಿದ್ದವರ ಸುತ್ತಲೂ ಸೂರ್ಯನ ಹೊಳಪಿಗಿಂತ ಹೆಚ್ಚಾಗಿ ಹೊಳೆಯುವದನ್ನು ಕಂಡೆನು. ನಾವೆಲ್ಲರು ನೆಲಕ್ಕೆ ಬೀಳಲು - "ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ? ಮುಳ್ಳುಗೋಲನ್ನು ಒದೆಯುವದು ನಿನಗೆ ಕಷ್ಟ ಎಂದು ಇಬ್ರಿಯ ಭಾಷೆಯಿಂದ ಹೇಳುವ ವಾಣಿಯನ್ನು ಕೇಳಿದೆನು" (ವಚನಗಳು 12-14).

ಪೌಲನ ಜೀವಿತದಲ್ಲಿ ಅನೇಕ ಸಂಗತಿಗಳು ಜರುಗಿದ್ದವು.[35] ಅವನು ಪುನರುತ್ಥಾನವನ್ನು ನಂಬಿದ್ದ ಫರಿಸಾಯನೂ ಆಗಿದ್ದನು - ಆದರೆ ದೇವರು ಅವನನ್ನು ತಡೆದು ಯೇಸುವನ್ನು ಅಂಗೀಕರಿಸುವಂತೆ ಮಾಡಿದ್ದನು (ಗಲಾತ್ಯ 1:15ಎ ನೋಡಿರಿ).[36] ಪೌಲನು ಈ ಕರೆಯನ್ನು

ವಿರೋಧ ವ್ಯಕ್ತಪಡಿಸಿದ್ದರಿಂದ - ತನಗೇ ಹಾನಿ ಮಾಡಿಕೊಂಡಿದ್ದನು. ಅದೇ ವಿಧವಾಗಿ ಅಗ್ರಿಪ್ಪನ ಕುಟುಂಬದರೂ ಸಹ ಮುಳ್ಳುಗೋಲಿಗೆ ವಿರುದ್ಧವಾಗಿ ಒದೆಯುತ್ತಿದ್ದರು. ಸುಮಾರು ಅರವತ್ತು ವರ್ಷಗಳ ಕಾಲ ಈ ರೀತಿಯಾಗಿಯೇ ಮುಂದುವರೆದಿದ್ದರು.[37] ಅರಸನು ಯಥಾರ್ಥನಾಗಿದ್ದರೆ, ಅವನ ತಂದೆಯು ಮರಣದ ಯಾತನೆಯನ್ನು ನೀಡುತ್ತಿರಲಿಲ್ಲ.

ದರ್ಶನದಲ್ಲಾದ ದೃಷ್ಟಾಂತವನ್ನು ಪೌಲನು ಮುಂದುವರಿಸಿ: "ಆಗ ನಾನು - ಕರ್ತನೇ ನೀನಾರು? ಅನ್ನಲು ಕರ್ತನು - ನೀನು ಹಿಂಸೆಪಡಿಸುವ ಕ್ರಿಸ್ತನೇ ನಾನು ಎಂದು ಪ್ರತ್ಯುತ್ತರ ನೀಡಿದನು" (26:15). ದೈವೀಕವಾದ ಮುಳ್ಳುಗೋಲು ಕತ್ತಿಯಾಗಿ ಮಾರ್ಪಟ್ಟು ಅವನ ಹೃದಯವನ್ನು ತಿವಿಯಿತು, ಮತ್ತು ಅವನ ಜೀವಿತವು ವಿಶೇಷವಾದ ಆಕಾರವನ್ನು ಪಡೆಯಿತು! ನಂತರ ಜೀವದಿಂದ ಎದ್ದ ಕರ್ತನು ಅವನಿಗೆ:

> ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವದಕ್ಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ.[38] ನಾನು ಈಗಲೂ ಮುಂದೆ ನಿನಗೆ ಕೊಡಲಿಕ್ಕಿರುವ[39] ದರ್ಶನಗಳಲ್ಲಿಯೂ ನಿನಗೆ ಕಾಣಿಸಿಕೊಂಡದ್ದನ್ನು ಕುರಿತು ನೀನು ಸಾಕ್ಷಿಯಾಗಿರ ಬೇಕು.[40] ನಾನು ನಿನ್ನನ್ನು ಇಸ್ರಾಯೇಲ್ ಜನರ[41] ಕೈಯೊಳಗಿಂದಲೂ ಅನ್ಯ ಜನರ ಕೈಯೊಳಗಿಂದಲೂ ಬಿಡಿಸುವೆನು. ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಕೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು (ವಚನಗಳು 16-18).

ಯಾರಾದರು ಅಡ್ಡಿ ಹೇಳಿದರೆ, "ನೀನು ಯೇಸು ಪ್ರತ್ಯಕ್ಷನಾದನೆಂಬ ವಾಕ್ಯವು ಮಾತ್ರವು ನಮಗೆ ಇದೆ," ಪೌಲನು ಸಂಪೂರ್ಣವಾದ ಉತ್ತರವನ್ನು ಹೊಂದಿರುವನು: "ನಾನು ಯೇಸುವನ್ನು ಕಾಣದಿದ್ದರೆ ನನ್ನ ಜೀವನದಲ್ಲಿ ಉಂಟಾದ ಬದಲಾವಣೆಗಳನ್ನು ಹೇಗೆ ವಿವರಿಸುವಿರಿ?"[42]

### "ನಾನು ಅವಿಧೇಯನೆಂದು ರುಜುವಾತು ಪಡಿಸಲಿಲ್ಲ" (26:19, 20)

ಈಗ ಪೌಲನು ತನ್ನ ಮುಳ್ಳುಗೋಲನ್ನು ಯೌವನಸ್ಥನಾದ ಅರಸನ ದಿಕ್ಕಿಗೆ ತಿರುಗಿಸಿದನು: "ಆದಕಾರಣ ಅಗ್ರಿಪ್ಪರಾಜನೇ, ಪರಲೋಕದಿಂದ ನನಗೆ ಉಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗಲಿಲ್ಲ" (ವಚನ 19). "ನಾನು ಅದನ್ನು ಹೇಗೆ ಮಾಡಲಿ? ಎಂಬ ಪ್ರಶ್ನೆಯಾಯಿತು, ಪೌಲನಿಗೆ ಅದು ಅಸಾಧ್ಯವಾದಾಗ, ಅರಸನಿಗೂ ಅಸಾಧ್ಯವಾಯಿತಲ್ಲವೇ!"

ಪೌಲನು ದೇವರ ಆಜ್ಞೆಗಳಿಗೆ ವಿಧೇಯನಾಗಿ; ಒಂದೇ ಸಾರಿ ದೀಕ್ಷಾಸ್ನಾನವನ್ನು ಹೊಂದಿದನು (22:16; 9:18). ಹಾಗೆಯೇ ಅವನು ದೇವರ ಸೇವೆಗೂ ಸಮರ್ಪಿಸಿ ಕೊಂಡನು:

> ಮೊದಲು ದಮಸ್ಕದವರಿಗೆ, ಆ ಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ[43] ಇರುವವರಿಗೆ ಮತ್ತು ಅನ್ಯ ಜನರಿಗೆ ಸಹ - ನೀವು ದೇವರ ಕಡೆಗೆ *ತಿರುಗಿಕೊಳ್ಳಬೇಕೆಂತಲೂ* ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕೆಂತಲೂ *ಸಾರಿದೆನು* (26:20; ಒತ್ತಿ ಹೇಳಿದ್ದು ನನ್ನದು).

ಪೌಲನು "ಸುನೀತಿ," "ದಮೆ" ಮುಂದಣ ನ್ಯಾಯ ವಿಚಾರಣೆಯ ಕುರಿತು ಈಗಾಗಲೇ ಪ್ರಸಂಗ ಮಾಡಿದ್ದನು (24:25); ಈಗ ಅವನು ಪಾಶ್ಚಾತ್ತಾಪವಿಲ್ಲದ ಯೆಹೂದ್ಯ ಅರಸನಿಗೆ

ಮಾನಸಾಂತರದ ಸಂದೇಶವನ್ನು ಸಾರುತ್ತಿದ್ದನು.[44] ಅ ಅರಸನು "ಯೆಹೂದ್ಯರ ಎಲ್ಲಾ ಆಚಾರಗಳನ್ನು ವಿವಾದಗಳನ್ನು ಬಲ್ಲವನಾಗಿದ್ದನು" (26:3ಎ). ಹೇಗೂ "ಯಾವನಾದರೂ ತನ್ನ ಒಡಹುಟ್ಟಿದವಳನ್ನು ಮದುವೆಯಾದರೆ, ಅವನನ್ನು ಹೊರ ಹಾಕಬೇಕು ಎಂಬ ನಿಯಮವನ್ನು ನಿಶ್ಚಿತವಾಗಿಯೂ ಬಲ್ಲವನಾಗಿದ್ದನು, ..." (ಯಾಜಕಕಾಂಡ 20:17). ಅದನ್ನು ಹೇಳುವದು ಅಪಾಯಕಾರಿಯಾಗಿದ್ದರೂ, ಅದನ್ನು ಧೈರ್ಯವಾಗಿ ಹೇಳಿದನು: "ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ ಮನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕೆಂತಲೂ ಸಾರಿದನು" (26:20ಬಿ)!

### "ನಾನು ಈ ದಿನದಲ್ಲಿ ನಿಂತುಕೊಂಡಿದ್ದೇನೆ" (26:21-23)

ಒಂದು ವೇಳೆ ಅಗ್ರಿಪ್ಪನು ಬದಲಾಗುವದಾದರೆ, ಕ್ರೈಸ್ತ ಜೀವಿತವು ಸುಲಭವಾದ ಜೀವಿತವಲ್ಲ ಎಂಬದನ್ನು ಅವನು ಅರಿಯಬೇಕಿತ್ತು. ಪೌಲನು ಮುಂದುವರಿಸಿ: "ಈ ಕಾರಣದಿಂದ ಯೆಹೂದ್ಯರು ದೇವಾಲಯದಲ್ಲಿ ನನ್ನನ್ನು ಹಿಡಿದು ಕೊಲ್ಲುವದಕ್ಕೆ ಪ್ರಯತ್ನಿಸಿದರು" ಅಂದನು (ವಚನ 21). ಒಂದು ವೇಳೆ ಅರಸನು ಕ್ರೈಸ್ತನಾಗುವದಾದರೆ, ಇದರಂತೆಯೇ ಅರಸನ ಸ್ನೇಹಿತರೂ ಸಹ ಅವನಿಗೆ ವಿರೋಧವಾಗುವ ಸಾಧ್ಯತೆಯಿತ್ತು.

ಅಂತಹ ಸಮರ್ಪಣೆಯನ್ನು ಅರಸನು ಮಾಡುವದಾದರೆ, ಕರ್ತನು ಅವನ ಸಂಗಡ ಇರುವನೆಂದು ಪೌಲನು ತಿಳಿಹೇಳಿದನು. ಆದ್ದರಿಂದ ಪೌಲನು, "ನಾನು ದೇವರಿಂದ ಸಹಾಯವನ್ನು ಪಡೆದು ಆ ದಿನದವರೆಗೂ ಸುರಕ್ಷಿತವಾಗಿರುವೆನು ..." ಅಂದನು (ವಚನ 22). ಅವನು "ನಿಂತುಕೊಳ್ಳ" ಬೇಕೆಂದು ಯೇಸು ತಿಳಿಸಿದ್ದರಿಂದ, ಅವನು ನಿಂತುಕೊಳ್ಳುವದರಲ್ಲಿ ಮುಂದಾಗಿದ್ದನು - ಅದಕ್ಕೆ ದೇವರ ಸಹಾಯವನ್ನು ಪಡಕೊಂಡನು. ಪೌಲನಿಗೆ ದೊರಕಿದಂಥ ಬಲವನ್ನು ಅರಸನು ಸಹ ಪಡೆಯಲು ಸಾಧ್ಯವಿತ್ತು.

ಪೌಲನು ದೇವರ ಮೇಲೆ ಅವಲಂಭಿತನಾಗಿ, ದೇವರ ಸೇವೆಯನ್ನು ಮುಂದುವರಿಸಿದನು:

> ... ಆದರೆ ನಾನು ದೇವರಿಂದ ಸಹಾಯವನ್ನು ಪಡೆದು ಈ ದಿನದವರೆಗೂ ಸುರಕ್ಷಿತವಾಗಿದ್ದು ಚಿಕ್ಕವರಿಗೂ ದೊಡ್ಡವರಿಗೂ ಸಾಕ್ಷಿಹೇಳುವವನಾಗಿದ್ದೇನೆ. ಪ್ರವಾದಿಗಳೂ ಮೋಶೆಯೂ ಮುಂದೆ ಆಗುವವೆಂದು ತಿಳಿಸಿದ ಸಂಗತಿಗಳನ್ನೇ ಹೊರತು ಇನ್ನೇನೂ ಹೇಳು ವವನಲ್ಲ. ಆ ಸಂಗತಿಗಳು ಏನೆಂದರೆ - ಕ್ರಿಸ್ತನು ಬಾಧೆಪಟ್ಟು ಸಾಯಬೇಕಾದವನು,[45] ಮತ್ತು ಆತನು ಸತ್ತವರೊಳಗಿಂದ ಮೊದಲನೆಯವನಾಗಿ ಎದ್ದು ಯೆಹೂದ್ಯರಿಗೂ ಅನ್ಯ ಜನರಿಗೂ ಬೆಳಕನ್ನು ಪ್ರಸಿದ್ಧಿ ಪಡಿಸುವವನಾಗಿರುವನು ಎಂಬದೇ (ವಚನಗಳು 22ಬಿ, 23).

ಪೌಲನು ಧರ್ಮೋಪದೇಶಕಾಂಡ 18, ಯೆಶಾಯ 53ರ ವಾಕ್ಯಗಳನ್ನು ಉಲ್ಲೇಖಿಸಿದ್ದನು. ಮೆಸ್ಸೀಯನು ಸತ್ತು ಎದ್ದು ಬರುವನು ಎಂದು, ಹಾಗೂ ಶುಭ ಸಂದೇಶ ವನ್ನು ಯಹೂದ್ಯರಿಗೂ, ಅನ್ಯರಿಗೂ ಸಾರಲ್ಪಡುತ್ತದೆ ಎಂದು ವಾಕ್ಯದಿಂದ ಸಾಭೀತು ಪಡಿಸಿದನು. "ನಾನು ನಿಮಗೆ ಪ್ರಸಿದ್ಧಿ ಪಡಿಸುವ ಯೇಸುವೇ ಆ ಕ್ರಿಸ್ತನೆ*ಂತಲೂ* ಸ್ಥಾಪಿಸಿದನು" (ಅಪೊಸ್ತಲರ ಕೃತ್ಯಗಳು 17:3ಬಿ; ಒತ್ತಿ ಹೇಳಿದ್ದು ನನ್ನದು)!

ಅಗ್ರಿಪ್ಪ ರಾಜನೇ ಪ್ರವಾದಿಗಳಲ್ಲಿ ನಿನಗೆ ನಂಬಿಕೆಯುಂಟೇ? ಎಂಬ ಯುಕ್ತಿಶುದ್ಧವಾದ ಹೇಳಿಕೆಯನ್ನು (26:27) ಮಾಡುವ ಮೊದಲೇ ಪೌಲನು ತನ್ನ ಮಾತನ್ನು ಪ್ರಾರಂಭಿಸಿದನು.

## ಫಲಿತಾಂಶ (26:24-32)

ಅಧ್ಯಾಯದ ಆರಂಭದಲ್ಲಿ, ಅಗ್ರಿಪ್ಪನಿಗೆ ಈ ಕಾರ್ಯಕ್ರಮವನ್ನು ವಹಿಸಿಕೊಟ್ಟ ಫೆಸ್ತನು

ಆಸ್ಥಳದಿಂದ ಹೊರ ಹೋಗಿದ್ದನು. ಹೇಗೂ ಪೌಲನ ಪ್ರಸಂಗದ ಸಮಯದಲ್ಲಿ ಅವನು ಸಹಿಸದಾಗದ ಪರಿಸ್ಥಿತಿಯಲ್ಲಿದ್ದನು. ಪೌಲನ ಮುಳ್ಳುಗೋಲನ್ನು ಹಾಗೂ ಗೌರವಾನ್ವಿತ ಅತಿಥಿಗಳನ್ನು ಪದೇ ಪದೇ ನೋಡಿದಕ್ಕೆ ಇದೇ ಸರಿಯಾದ ಸಮಯ ಎಂದು ರಾಜನು ನಿರ್ಧರಿಸಿದನು. ಫೆಸ್ತನು ಮುಳ್ಳುಗೋಲನ್ನು ಹಾಗೂ RSPCA ಯನ್ನು (the Roman Society for the Prevention of Cruelty to Agrippa).[46] ಎಂಬುವರನ್ನು ಕರೆಸುವ ಸಮಯ ಅಂದುಕೊಂಡನು. "ಹೀಗೆ ಪೌಲನು ಪ್ರತಿವಾದ ಮಾಡುತ್ತಿದ್ದಾಗ ಫೆಸ್ತನು ಮಹಾಶಬ್ದದಿಂದ - ಪೌಲನೇ, ನೀನು ಮರುಳಾಗಿದ್ದಿ! ನೀನು ಬಹಳವಾಗಿ ಮಾಡುವ[47] ಶಾಸ್ತ್ರವಿಚಾರವು ನಿನ್ನನ್ನು ಮರುಳು ಗೊಳಿಸುತ್ತದೆ ಅಂದನು" (ವಚನ 24).

ಫೆಸ್ತನ ಮಾತುಗಳು ಯಾವುದೇ ತಡೆಯಿಲ್ಲದೆ ರಭಸವಾಗಿ ಬಂದವು, ಆದರೆ ಅವನ ಮಾತುಗಳಲ್ಲಿ ಯಾವದೇ ವ್ಯತ್ಯಾಸಗಳು ಕಾಣುವದಿಲ್ಲ. ಅವನು ಅಲ್ಪಸ್ವಭಾವದವ ನಾಗಿದ್ದರಿಂದ, ಯುಗಗಳಲ್ಲಿ ಅತಿ ಮಹತ್ವದ ಸತ್ಯಗಳನ್ನು ವಜಾ ಮಾಡಿದನು, "ಸತ್ತು ಹೋದಂತ ಯೇಸುವಿನ ವಿಷಯದಲ್ಲಿ, ಪೌಲನು ಆ ಯೇಸು ಜೀವಿತನಾಗಿದ್ದಾನೆಂದು ಹೇಳಿದನು ಈ ವಿಚಾರವನ್ನು ಫೆಸ್ತನು ಭಿನ್ನಾಭಿಪ್ರಾಯ" ಎಂದು ಹೇಳಿದ್ದನು (25:19). ಅಸತ್ಯ ಹೇಳಿದವನನ್ನು ಮರುಳಾದವನು ಎಂದು ಕರೆದನು.

ಮರುಳಾದವನಂತೆ ಫೆಸ್ತನು ನಟಿಸುತ್ತಿದ್ದನು. ಪೌಲನು ಸಮಾಧಾನದಿಂದ ಉತ್ತರಿಸಿ: "ಶ್ರೀಮಾನ್ ಮಹಾ ಫೆಸ್ತನೆ, ನಾನು ಮರುಳಾಗಿಲ್ಲ; ಸ್ವಸ್ಥ ಬುದ್ಧಿಯುಳ್ಳವನಾಗಿ[48] ಸತ್ಯವಾದ ಮಾತುಗಳನ್ನಾಡುತ್ತೇನೆ" (26:25). ಪೌಲನು ಯೇಸವನ್ನು ಅಂಗೀಕರಿಸುವ ಮೊದಲು ಮರುಳಾದವನಾಗಿದ್ದನು (ವಚನ 11).[49] ಆದರೆ ಈಗ, "ಸ್ವಸ್ಥ ಬುದ್ಧಿವುಳ್ಳವನಾಗಿದ್ದನು" (ಮಾರ್ಕ 5:15).

ಅಪೊಸ್ತಲನು ಅಗ್ರಿಪ್ಪನ ಕಡೆಗೆ ಹಿಂತಿರುಗಿ: "ಅರಸನು ಈ ಸಂಗತಿಗಳನ್ನು ತಿಳಿದವನು; ಅವನ ಮುಂದೆ ಧೈರ್ಯವಾಗಿ ಮಾತನಾಡುತ್ತೇನೆ. ಇವುಗಳಲ್ಲಿ ಒಂದಾದರೂ ಅವನಿಗೆ ಮರೆಯಾದದ್ದಲ್ಲವೆಂದು ನಂಬಿದ್ದೇನೆ, ಯಾಕಂದರೆ ಇದು ಮೂಲೆಯಲ್ಲಿ ನಡೆದ ಕಾರ್ಯವಲ್ಲ" (ವಚನ 26). ಕ್ರೈಸ್ತತ್ವವು ರಹಸ್ಯವಾದ ಸಂಗತಿಯಾಗಿರಲಿಲ್ಲ; ಮನೆಯ ಮೇಲ್ಭಾವಣಿಯಿಂದ ಸುವಾರ್ತೆ ಗಟ್ಟಿಯಾಗಿ ಸಾರಾಲಾಗಿದೆ (ಮತ್ತಾಯ 10:27). ಯೇಸುವಿನ ವೈಯಕ್ತಿಕ ಸೇವಾ ಅವಧಿಯ ಸಮಯದಲ್ಲಿ ಅಗ್ರಿಪ್ಪನು ಜನಿಸಿದ್ದನು; ಅವನು ಸೇವಿಸುತ್ತಿದ್ದ ಮಕ್ಕಳ ಆಹಾರದ ಸಂಗಡ ಯೇಸುವಿನ ಹಾಗೂ ಅಪೊಸ್ತಲರ ಕುರಿತಾಗಿ ಬೋಧಿಸಲ್ಪಟ್ಟಿದ್ದನು. ಪೌಲನ ಹೇಳಿಕೆಗಳನ್ನು ಅವನು ಗ್ರಹಿಸಲು ಶಕ್ತನಾಗಿದ್ದನು. ಹೇಗೂ ಅವನು ಅತಿಥೇಯರ ಪರವಾಗಿ ವರ್ತಿಸಬೇಕಿದ್ದರಿಂದ ಪೌಲನನ್ನು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸಿದನು. ಆದ್ದರಿಂದ ಅವನು ಮೌನವಾದನು.

ಅವನ ಮೌನದ ನಿಮಿತ್ತ ಪೌಲನು ಅಪಾರ್ಥಮಾಡಿಕೊಂಡನೆಂದು ತಿಳಿದು, ಪೌಲನು ಅವನನ್ನು ಒತ್ತಾಯಿಸಿದನು: "ಅಗ್ರಿಪ್ಪರಾಜನೇ, ಪ್ರವಾದಿಗಳಲ್ಲಿ ನಿನಗೆ ನಂಬಿಕೆಯುಂಟೇ? ಉಂಟೆಂದು ಬಲ್ಲೆನು" (ವಚನ 27). ಒಂದು ವೇಳೆ ಆ ಯೌವನಸ್ಥನಾದ ಆಡಳಿತಗಾರನು, ಪ್ರವಾದಿಗಳನ್ನು ನಂಬಲಿಲ್ಲ ಎಂದಿದ್ದರೆ, ಅವನು ಯೆಹೂದ್ಯ ಜನರ ಗೌರವವನ್ನು ಕಳಕೊಳ್ಳುತ್ತಿದ್ದನು. ಒಂದು ವೇಳೆ ಅವನು, ಪ್ರವಾದಿಗಳನ್ನು ನಂಬುತ್ತೇನೆ ಎಂದು ಹೇಳಿದ್ದರೆ, ಪೌಲನು ಅವನಿಗೆ "ಪ್ರವಾದಿಗಳು ತಿಳಿಸಿದ ಯೇಸುವನ್ನು ಅಂಗಿಕರಿಸಲಿಕ್ಕೆ ಸಿದ್ಧನಿರುವೆಯಾ?" ಎಂಬ ಪ್ರಶ್ನೆಯನ್ನು ಕೇಳಿರಬಹುದು. ಅಗ್ರಿಪ್ಪನು ಏನನ್ನಾದರೂ ಹೇಳು ವನೆಂದು ಜನರು ಕಾಯುತ್ತಿದ್ದರು. ನಂತರ ಅವನು ಮಾತನಾಡಿ: "ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ" ಅಂದನು[50] (ವಚನ 28).

ಅಗ್ರಿಪ್ಪನ ಮಾತಿನ ಶೈಲಿಯನ್ನು ನಾನು ಊಹಿಸುತ್ತೇನೆ: ಅದರಲ್ಲಿನ ಸ್ವರವನ್ನು, ಅವನ ಮುಖದಲ್ಲಾದ ಬದಲಾವಣೆಯನ್ನು, ಅವನ ದೇಹದ ಆಕಾರವನ್ನೂ ಊಹಿಸುತ್ತೇನೆ. ಮೂಲ

ವಾಕ್ಯಗಳಲ್ಲಿ ಅವನ ವಿವಿಧವಾದ ಶೈಲಿಯನ್ನು ಗಮನಿಸಬಹುದು.[51] ಇತರೆ ಅನುವಾದ ಗಳಿಂದ ಅದಕ್ಕೆ ಸಾಕ್ಷಾಧ್ಧಾರಗಳನ್ನು ಪಡೆಯುತ್ತೇವೆ. ಕೆಲವರ ಅಭಿಪ್ರಾಯದಂತೆ ಅಗ್ರಿಪ್ಪನು *ಯಥಾರ್ಥನಾಗಿದ್ದನು* (KJV); ಇನ್ನು ಕೆಲವರ ಅಭಿಪ್ರಾಯದಂತೆ ಪೌಲನ ಕುರಿತು ಅಗ್ರಿಪ್ಪನು *ಅನುಕಂಪಪಡುವವನಾಗಿದ್ದನು* (NIV); ಅದರ ಕುರಿತ ಪೂರ್ಣ ತಿಳುವಳಿಕೆಯನ್ನು ಹೊಂದಿರಲಿಲ್ಲ; ಮತ್ತು ಇದರ *ಮರ್ಮಬೇಧವನ್ನು* ಅರಿತಿರಲಿಲ್ಲ (RSV).[52] ಪೌಲನ ಮಾತುಗಳ ಮೊದಲು, ಮಾತಿನ ಸಮಯದಲ್ಲೊ, ಮಾತಿನ ನಂತರವು ಅಗ್ರಿಪ್ಪನು ಪೌಲನ ಕುರಿತು, ಅನುಕಂಪ ಹೊಂದಿದ್ದನು (25:24; 26:1, 32), ಪ್ರಾಯಶಃ ಈ ಊಹೆಗಳ ಆಯ್ಕೆಯನ್ನು ನಿರ್ಗಮನ ಮಾಡಬೇಕು. ಅರಸನು ಪರಿವರ್ತನೆಗೆ ಅತಿ ಹತ್ತಿರವಾಗಿದ್ದ ಅಂತರವನ್ನು, ನಾವು ಅರಿಯಲು ಅಸಾಧ್ಯ.

ಅಗ್ರಿಪ್ಪನ ಆಲೋಚನೆ ಏನೇ ಇರಲಿ, ಪೌಲನು ಅವನ ಮಾತಿನ ಅರ್ಥವನ್ನು ಗ್ರಹಿಸಿಕೊಂಡನು.[53] ಮತ್ತು ಆ ಮಾತುಗಳ ಸಹಾಯದಿಂದ ಬಹಳ ಶಕ್ತಿಯುತವಾದ ಹಾಗೂ ಪರಿಣಿತಿಯ ಮಾತುಗಳನ್ನು ಬರೆದನು:

> ಅಲ್ಪ ಪ್ರಯತ್ನದಿಂದಾಗಲಿ ಅಧಿಕ ಪ್ರಯತ್ನದಿಂದಾಗಲಿ ನೀನು ಮಾತ್ರವಲ್ಲದೆ ಈ ಹೊತ್ತು ನನ್ನ[54] ಮಾತುಗಳನ್ನು ಕೇಳುವವರೆಲ್ಲರೂ ಈ ಬೇಡಿಗಳ ಹೊರತು ನನ್ನಂತೆ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ ಅಂದನು[55] (26:29).

ಈ ಆಧಾರದ ಮೇರೆಗೆ, ಅಗ್ರಿಪ್ಪನು ತುಸು ಹೆಚ್ಚಾಗಿಯೇ ಮಾತನಾಡಿದನು. "ಆ ಮೇಲೆ ರಾಜನೂ ದೇಶಾಧಿಪತಿಯೂ ಬೆರ್ನಿಕೆಯೂ ಅವರ ಸಂಗಡ ಕೂತಿದ್ದ ಪ್ರಮುಖರು ಎದ್ದು" (ವಚನ 30) ಎಂಬುದಾಗಿದೆ. ಪ್ರಮುಖರು ನಿಂತುಕೊಳ್ಳುವಾಗ, ಸಂದರ್ಶನವು ಮುಗಿಯಿತು ಎಂದು ನಾನು ಪದೇ ಪದೇ ಹೇಳಿದ್ದೇನೆ!

ಫೆಸ್ತನು ಮತ್ತು ಅವನ ಗೌರವಾನ್ವಿತ ಅತಿಥಿಗಳು, ಪೌಲನಿಂದ ತಿರುಗಿಕೊಂಡು, ಅವರು "ಪರಸ್ಪರ ಪೌಲನ ಬಗ್ಗೆ ಮಾತನಾಡಲು ಆರಂಭಿಸಿದರು" (ವಚನ 31ಎ). ಅವರು ಒಂದಾಗಿ ಕೂಡಿಮಾಡಿದ ನಿರ್ಣಯವೇನೆಂದರೆ - ಈ ಮನುಷ್ಯನು ಮರಣದಂಡನೆಗಾಗಲಿ ಬೇಡಿಗಾಗಲಿ ಆಧಾರವಾದದ್ದೇನೂ ಮಾಡುವವನಲ್ಲ ಎಂಬುದಾಗಿ ತಮ್ಮ ತಮ್ಮಲ್ಲಿ ಮಾತಾಡಿಕೊಂಡರು (ವಚನ 31ಬಿ). ಅದು ಪೌಲನಿಗೆ ಜಯವಾಗಿದರೂ, ಅವನು ಇಚ್ಚಿಸುವ ಜಯವಾಗಲಿಲ್ಲ. ಅವನು ತನಗಾಗಿ ಅಲ್ಲದೆ ಯೇಸುವಿಗಾಗಿ ಸತ್ಯವನ್ನು ಸ್ಥಾಪಿಸಿದನು. ಅವರ ದಯೆಯನ್ನು ಪಡೆಯದೆ, ಅವರ ಆತ್ಮಗ ಳನ್ನು ಗೆದ್ದು ಕೊಳ್ಳಲು ಪ್ರಯತ್ನಿಸಿದನು.[56]

ಹೇಗೂ, ಫೆಸ್ತನು ರೋಮಾಯದವರಿಗೆ ಪತ್ರವನ್ನು ಬರೆಯುವ ಸ್ಥಿತಿಯಲ್ಲಿರಲಿಲ್ಲ ಏಕೆಂದರೆ, ಪೌಲನ ಕುರಿತ ಯಾವುದೇ ಅಪವಾದಗಳು ಸಾಭೀತಾಗಿರಲಿಲ್ಲ! ಆ ದೇಶಾಧಿಪತಿಯು ಏನನ್ನಾದರೂ ಬರೆದಿರಬಹುದು, ಆದರೆ, ತನ್ನನ್ನು ಹೊರತು ಪಡಿಸಿ, ಇತರರನ್ನೇ ತಪಿತಸ್ಥರೆಂದು ನಿರೂಪಿಸಿದ್ದನು! ತೋರಿಕೆಯಲ್ಲಿ ಅವನು ಪೌಲನ ಪರವಾಗಿ ದ್ದನು ಎಂದು ಕಾಣುತ್ತಿತ್ತು, ಯಾಕೆಂದರೆ ಪೌಲನ ಪ್ರಯಾಣದಲ್ಲೂ ಅವನ ರೋಮಾಯದ ವಾಸದಲ್ಲೂ ಅವನಿಗೆ ದಯೆ ತೋರಲಾಗಿತ್ತು (28:16, 30, 31).

ಅಧ್ಯಾಯ 26ರಲ್ಲಿ ಒಂದು ಅಂತಿಮವಾದ ಹೇಳಿಕೆಯಿದೆ - ಅದು ಒಂದು ನಂಬಲಾರದ ಘಟನೆಯಾಗಿದೆ. ಒಬ್ಬ ಹೆರೋದನು ಎಂದಿಗೂ ಪೌಲನನ್ನು ಹೊಗಳಲಾರನು, ಯಾಕೆಂದರೆ ಪೌಲನು ಯೇಸುವಿನ ಅನುಯಾಯಿಯಾಗಿದ್ದನು. ಒಬ್ಬ ಯೆಹೂದ್ಯ ಮುಖಂಡನು ಯಾಜಕನ ಸಂಗಡ ಸೇರಿಕೊಂಡವನಾಗಿದ್ದರೆ, ಪೌಲನ ಕುರಿತಾಗಿ ಯಾವುದೇ ಒಳ್ಳೆಯ ಮಾತನ್ನು ಆಡಲಾರನು; ಆದಾಗ್ಯೂ ಎರಡನೇ ಹೆರೋದ ಅಗ್ರಿಪ್ಪನು, ಯಾಜಕನನ್ನು ನೇಮಿ ಸುವವನಾಗಿದ್ದರು, ಪೌಲನನ್ನು ಕೊಲ್ಲುವ ವಿಚಾರದಲ್ಲಿ ಹಿಂಜರಿದನು, ಅಥವಾ ಎರಡನ್ನೂ ಮಾಡಿರಬಹುದು! ಅಗ್ರಿಪ್ಪನು ಫೆಸ್ತನಿಗೆ, "ಈ ಮನುಷ್ಯನು ಚಕ್ರವರ್ತಿಯ ಎದುರಿನಲ್ಲಿ ಹೇಳಿ

ಕೊಳ್ಳುತ್ತೇನೆಂದು ಹೇಳದೆ ಹೋಗಿದ್ದರೆ ಇವನನ್ನು ಬಿಡಬಹುದಾಗಿತ್ತು ಅಂದನು"[57] (ವಚನ 32). ಹೆರೋದರಲ್ಲಿ ಕಡೆಯನಾದವನ ಸಂದೇಶ ಕೇಳಲು ಕೂತುಹಲ ನಿಮಗಿದ್ದರೆ, ಆ ವಿಚಾರವನ್ನು ನಾವು ಅರಿಯೆವು.

## ಮುಕ್ತಾಯ

ಬೇಸರಗೊಂಡವನಾದ ಪೌಲನನ್ನು ಸೆರೆಮನೆಯ ಕೊಠಡಿಗೆ ಪುನಃ ಕರೆದೊಯ್ಯುವ ಚಿತ್ರಣವು ನಮ್ಮ ಕಣ್ಣಿನ ಮುಂದೆ ಬರುತ್ತದೆ, "ಅವನಿಗೆ ಇದು ವ್ಯರ್ಥವಾದ ಸಮಯವಾಯಿತು" ಎಂದು ಹೇಳುವ ಶೋಧನೆಗೆ ನಾವು ಒಳಗಾಗಬಹುದು! ಆದರೆ ಈ ಸಂದರ್ಭದಲ್ಲಿ ಪೌಲನು "ಅತಿ ಉತ್ತಮವಾದಂಥ ಪ್ರಸಂಗವನ್ನು ಮಾಡಿದ್ದನು, ಆದಾಗ್ಯೂ ಒಬ್ಬನಾದರೂ ಪರಿವರ್ತನೆಗೊಳ್ಳಲಿಲ್ಲ!" ಈ ವಿಚಾರದಲ್ಲಿ ಸಮಯವೇನು ವ್ಯರ್ಥವಾಗಲಿಲ್ಲ; ಅಗ್ರಿಪ್ಪ ಹಾಗೂ ಇತರರಿಗೆ ಬೆಳಕಿನ ಮಾರ್ಗ ದರ್ಶನ ನೀಡಲಾಯಿತು; ಅವರ ಕಣ್ಣು ತೆರೆಯದೇ ಹೋದದ್ದಕ್ಕೆ ಪೌಲನು ಕಾರಣನಲ್ಲ. ಅಗ್ರಿಪ್ಪ ಮತ್ತು ಅವನ ಸಂಗಡಿಗರಿಗೂ ಸ್ವತಂತ್ರದ ಮಾರ್ಗವನ್ನು ತೋರಿಸಲಾಯಿತು; ಆದರೆ ಅವರು ಪಾಪದ ದಾಸತ್ವದಲ್ಲಿ ಮುಂದುವರೆದದ್ದಕ್ಕೆ ಪೌಲನು ಕಾರಣನಲ್ಲ. ಪೌಲನು ಅವರಿಗೆ ಯೇಸುವಿನ ಕುರಿತು ಪ್ರಬೋಧನೆ ನೀಡಿದ್ದನು; ಆದ್ದರಿಂದ ಅವರುಗಳು ತಪ್ಪಿಸಿಕೊಳ್ಳುವ ಕಾರಣಗಳಿರಲಿಲ್ಲ.

ಇದನ್ನು ಅಭ್ಯಾಸಿಸುವಾಗ, ನಿಮ್ಮನ್ನು ಆ ಸ್ಥಾನದಲ್ಲಿ ಇರಿಸಿಕೊಳ್ಳುವಿರಿ ಎಂದು ನಾನು ನಿರೀಕ್ಷಿಸಿದ್ದೇನೆ. ನಿಮ್ಮ ಜೀವಿತದ ಮಾರ್ಗವನ್ನು ಬದಲಿಸಲು, ಕರ್ತನ ಮುಳ್ಳು ಗೋಲಿನ ತಡೆಯು ನಿಮಗುಂಟಾಗಿರಬಹುದೆಂದು ನೆನಸುತ್ತೇನೆ.[58] ಪೌಲನಂತೆ, "ನಾನು ನಿಮಗೆ ಮನವಿ ಮಾಡುವದೇನೆಂದರೆ, ನೀನು ಮಾತ್ರವಲ್ಲದೆ ಈ ಹೊತ್ತು ನನ್ನ ಮಾತುಗಳನ್ನು ಕೇಳುವವರೆಲ್ಲರೂ ... ನನ್ನಂತೆ ಆಗ ಬೇಕೆಂದು" - ಕ್ರೈಸ್ತನಾಗುವಂತೆ, ಯೇಸುವಿನ ಅನುಯಾಯಿ ಆಗಬೇಕು (ಅಪೊಸ್ತಲರ ಕೃತ್ಯಗಳು 26:29). ಅಂತಿಮವಾಗಿ, ದೇವರ ವಾಕ್ಯಕ್ಕೆ ಪ್ರತಿಕ್ರಿಯೆ ನೀಡುವದನ್ನು ನೀವೇ ನಿರ್ಧರಿಸಬೇಕು. "ಪರಲೋಕದ ದರ್ಶನಕ್ಕೆ ಪೌಲನು ಅವಿಧೇಯನಾಗದ ಹಾಗೆ" (ವಚನ 19ಬಿ). ನೀವುಗಳಿರ ಬೇಕೋ, ಅಥವಾ ಎದ್ದು ಹೋದ ಅಗ್ರಿಪ್ಪನಂತಾಗಬೇಕು. ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿರುವಿರಿ?

## ದೃಶ್ಯ ಸಂಬಂಧವಾದ – ಟಿಪ್ಪಣಿ

ಆರು ಅಥವಾ ಎಂಟು ಅಡಿಗಳ ಉದ್ದವಿರುವ ಒಂದು ಚೂಪಾದ ಕೋಲನ್ನು ವಾಸ್ತವಿಕ ವಾಗಿ ಮುಳ್ಳುಗೋಲಿನಂತೆ ಬಳಸಿರಿ. ಪೌಲನು, ಅಗ್ರಿಪ್ಪನಿಗೆ ಬಳಸಿದ ತಡೆ ಪದಗಳನ್ನು ಹೇಳು ವಾಗ, ಕೋಲನ್ನು ಗಾಳಿಯಲ್ಲಿ ಎತ್ತಿ ತೋರಿಸಿರಿ.

ಟಿಪ್ಪಣಿಗಳು

[1]ಆಧುನಿಕ ರೈತರು "ಹಾಟ್ ಶಾಟ್" ಎಂಬ ವಸ್ತುಗಳನ್ನು ಬಳಸುವರು (ವಿದ್ಯುತ್ ಶಾಕ್), ಆದರೆ ಹಲವಾರು ಜನರು ಈ ವಿಧದ ಕೋಲನ್ನೆ ಬಳಸುವರು. [2]"ತಡೆ" ಎಂಬುದಕ್ಕೆ "ಮುಳ್ಳುಗೋಲು" ಎಂದು ಬಳಸಿರುವೆನು, ಅವುಗಳನ್ನು ಹೇಳಿಕೆಯಲ್ಲಿ ತಿಳಿಸಿರುವೆನು. ಸಕರಾತ್ಮಕವಾದ ಪದ ಬಳಕೆಯಾಗಿದೆ. [3]ಹೆರೋದ ಅಗ್ರಿಪ್ಪ IIನ್ನು ಚರಿತ್ರೆಯಲ್ಲಿ ಅಗ್ರಿಪ್ಪರಾಜ ಎಂದು ಕರೆದಿರುವರು. ಅಪೊಸ್ತಲರ ಕೃತ್ಯಗಳು 12ರ ಕಥೆಯಂತೆ, ಅವನ ತಂದೆಯಾದ ಅಗ್ರಿಪ್ಪನು ಯಾಕೋಬನನ್ನು ಕೊಂದು, ಪೇತ್ರನನ್ನು ಕೊಲ್ಲಲು ಪ್ರಯತ್ನಿಸಿದನು. ಅವನ ಮುತ್ತಜ್ಜನಾದ ಹೆರೋದ ಮಹಾರಾಜನು, ಮಗುವಾದ ಯೇಸುವಿಗೆ ವಿರೋಧಿಯಾಗಿದ್ದನು. ಅಗ್ರಿಪ್ಪನು ಹೆರೋದ ಸಾಮ್ರಾಜ್ಯದ ಕೊನೆಯ ಅರಸ,

ಅಪೊಸ್ತಲರ *ಅಪೊಸ್ತಲರ ಕೃತ್ಯಗಳು, 3ನೇ* ನೋಡಿರಿ. [4]Henry E. Dosker, “Herod,” in *The International Standard Bible Encyclopedia,* ed. James Orr (Grand Rapids, Mich.: Wm. B. Eerdmans Publishing Co., 1960), 3:1383. [5]ಅವನ ಚಿಕ್ಕಪ್ಪನ (ಹೆರೋದ ಬಾಲ್ಸಿಸ್‌ನ) ಹೆಸರು ಸತ್ಯವೇದದಲ್ಲಿರುವದಿಲ್ಲ. ಅಲ್ಲಿ ಅನೇಕ ಅರಸರು ತಮ್ಮ ಹತ್ತಿರ ಸಂಬಂಧಗಳನ್ನೇ ಮದುವೆಯಾದರು. [6]“ಬೆರ್ನಿಕೆಯು” ಅಧಿಕೃತವಾದ ರಾಣಿಯಾಗಿದ್ದಳು ಎಂದು ಪುರಾತನ ಬರಹಗಳಿವೆ. [7]ನಂತರದಲ್ಲಿ ತೀತನ ಬಂದು ಯುದಾಯದ ಯೆಹೂದ್ಯರ ದಂಗೆಯನ್ನು ಹತ್ತಿಕ್ಕಿದಾಗ, ಆಕೆಯು ಅವನೊಂದಿಗೆ ಸಂಬಂಧದವನ್ನು ಹೊಂದಿದ್ದಳು, ರೋಮಾಯರ ವಿರೋಧದ ಕಾರಣ ಅವಳನ್ನು ಮದುವೆಯಾಗಲಿಲ್ಲ. [8]J. W. McGarvey, *New Commentary on Acts of Apostles*, vol. 2 (Delight, Ark.: Gospel Light Publishing Co., n.d.), 248-49. [9]ಸ್ತ್ರೀಯರು ಹಾಜರಿದ್ದರೂ, “ಫೆಸ್ತನು” ಪುರುಷರೇ ಎಂದು ಹೇಳಿದನು, ಅಲ್ಲಿ ಬೆರ್ನಿಕೆಯೂ ಇದ್ದಳು. ಒಂದು ವೇಳೆ ತನ್ನ ಅತಿಥಿಯನು ಅವಮಾನ ಪಡಿಸಲು ಹೇಳಿರುವದಿಲ್ಲ. ಪದ್ಧತಿ ಇರಬಹುದು. [10]ನಮ್ಮ ಹಾಗೆ ಫೆಸ್ತನು ಬಿದ್ದು ಹೋದನು. ಅವನೊಂದಿಗೆ ಮಾತನಾಡಿದ ಯೆಹೂದ್ಯರಂತೆ ವರ್ತಿಸಿದನು. “ಎಲ್ಲಾ ಯೆಹೂದ್ಯರು” ಎಂದು ಆತನು ಹೇಳಿದನು. “ಪ್ರತಿಯೊಬ್ಬರು ಇದ್ದನ್ನೊ ಅಥವಾ ಅದನ್ನೊ!” ಯೋಚಿಸುತ್ತಾರೆ ಎಂದು ಹೇಳುವುದು ಎಷ್ಟು ಸುಲಭ.

[11]ಫೇಸ್ತನು ಯಾವಾಗಲು ಇನ್ನೊಬ್ಬರ ಮೇಲೆಯೇ ಅಪವಾದವನ್ನು ಹೊರಿಸುತ್ತಿದ್ದನು ಎಂದು ಗಮನಿಸುತ್ತೇವೆ. ಫಿಲಿಪ್ಪನ ಮೇಲೆ (25:14), ಯೆಹೂದ್ಯರ ಮೇಲೆ (25:24), ಪೌಲನ ಮೇಲೆ (26:32). [12]ಪೌಲನ ವಿಚಾರಣೆಯ ಇನ್ನೊಬ್ಬನಿಗೆ ಸೇರಿದ್ದರಿಂದ, ಫೇಸ್ತನ ನಿರ್ಧಾರಕ್ಕೆ ಸಂಗತಿಯು ಒಳಗಾಗಲಿಲ್ಲ. [13]ಪೌಲನು ನಿರಪರಾಧಿಯೆಂದು ತಡವಾಗಿ ಹೇಳಿದನು, ಆದರೆ ಆ ಸ್ಥಳದ ಸಬೆಯ ಇತರೆ ಜನರಿಗೆ ಅದು ಅನುಕೂಲವಾಯಿತು. [14]ಪೌಲನು ಪ್ರಸಂಗದ ಸಮಯದಲ್ಲಿ ಕೈ ಮೇಲೆ ಮಾಡುತ್ತಿದ್ದನು, ಅದು ಗೌರವದ ವಂದನೆಯೂ ಆಗಿರಬಹುದು. [15]ಇವರ ಮುಂದೆ ಇದು ವಿಶೇಷವಾದ ಹಾಗೂ ಉದ್ದವಾದ, ನಯವಾದ ವಿಚಾರಣೆಯಾಗಿತ್ತು. [16]ಪೌಲನು, ಯೆಹೂದ್ಯರೊಂದಿಗೆ ಮಾಡಿದ ಯೇಸುವಿನ ಕುರಿತಾದ ವಿಚಾರದಲ್ಲಿ ವ್ಯತ್ಯಾಸವಾಗಿರಬಹುದು. [17]ತರ್ತುಲನ ಹಾಗೆ ಪೌಲನು ಕಡಿಮೆಯಾಗಿ ಮಾತನಾಡಲಿಲ್ಲ (24:4). ಅಧ್ಯಾಯ 26ನ್ನು 5 ನಿಮಿಷಗಳಲ್ಲಿ ಓದಬಹುದು. ಲೂಕನು ತಾತ್ವೀಕವಾದ ಸಂದೇಶವನ್ನು ನೀಡಿರುವನು. [18]ಫೆಸ್ತನು ಅಪ್ರಯೋಜಕನೆಂದು ಪೌಲನು ತಿಳಿದನು (ಮತ್ತಾಯ 7:6). ಪೌಲನು ಜನರ ಕುರಿತು ಎರಡು ಸಾರಿ ಹೇಳಿದನು (26:8, 29), ಅಗ್ರಿಪ್ಪನ ಮೇಲೆ ತನ್ನ ಆಲೋಚನೆಯನ್ನು ಕೇಂದ್ರಿ ಕರಿಸಿದನು. [19]ಅಪೊಸ್ತಲರ ಕೃತ್ಯಗಳು 7:58ರ ಚರ್ಚೆಯನ್ನು *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ “ನೀನು ಯಾವುದಕ್ಕೆ ಸಾಯುವವನಾಗಿದ್ದಿ” ಎಂಬ ಪಾಠದಲ್ಲಿ ಗಮನಿಸಿರಿ. [20]This is an adaptation of Warren W. Wiersbe’s five points in *The Bible Exposition Commentary,* vol. 1 (Wheaton, Ill.: Victor Books, 1989), 504-6.

[21]ತಾರ್ಸದ ಹಾಗೂ ಯೆಹೂದ್ಯದ ಯೆಹೂದ್ಯರನ್ನು ಕುರಿತು “ನನ್ನ ಜನಾಂಗ ಎಂದಿರಬಹುದು.” [22]“ಶಿಷ್ಯತ್ವದ ಹಾದಿಯಲ್ಲಿ” ಎಂಬ ಪಾಠವನ್ನು *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ ನೋಡಿರಿ. [23]12 ಕುಲಗಳು, ಕಳೆದು ಹೋದ 10, ಕುಲಗಳು, ತಪ್ಪಾದ ಸಿದ್ಧಾಂತಗಳಾಗಿವೆ. (1) ಯೂದ ಮತ್ತು, ಬೆನ್ಯಾಮೀನನ ಕುಲದ ಯೆಹೂದ್ಯರು ಮಾತ್ರ ಹೊಸ ಒಡಂಬಡಿಕೆಯ ಸಮಯದಲ್ಲಿದ್ದರು ಎಂಬದು ತಪ್ಪಾದ ಅಭಿಪ್ರಾಯ ಎಂದು ಮಾರ್ಷಲ್ ಹೇಳಿರುವರು ಉತ್ತರದ (ಇಸ್ರೇಲಿನ) ಕುಲಗಳನ್ನು ಅಸ್ಸಿರಿಯನ್ನರು 722 ಕ್ರಿ.ಪೂ. ದಲ್ಲಿ ವಶಪಡಿಸಿಕೊಂಡಿದ್ದರೂ, 10 ಕುಲಗಳು ಕಳೆದು ಹೋದರು ಎಂಬ ತಾತ್ಪರ್ಯವಲ್ಲ (ಮತ್ತಾಯ 19:28) (ಯಾಕೋಬ 1:1). ಅಪೊಸ್ತಲನಾದ ಯೋಹಾನನ (ಪ್ರಕಟಣೆ 7:4-8; 21:12). ವಾರನ್ ವೆರ್ಸ್ಬಿ. [24]“ಮೆಸ್ಸೀಯಾ” ಮತ್ತು “ಕ್ರಿಸ್ತ” ಎಂಬುದನ್ನು ಪದಪಟ್ಟಿ ಭಾಗ 2ರಲ್ಲಿ *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ನೋಡಿರಿ. [25]For an explanation of how these hopes developed, see William Barclay, *The Letters to the Corinthians,* The Daily Study Bible Series, rev. ed. (Philadelphia: Westminster Press, 1975), 139-40. [26]ಯೋಬ 19:25-27; ಕೀರ್ತನೆ 16:10; ಯೆಶಾಯ 26:19; ಹೊಶೆಯ 6:2; ಹಳೇ ಒಡಂಬಡಿಕೆಯ ಪುನರುತ್ಥಾನಕ್ಕೆ (1 ಅರಸು 17:23; 2 ಅರಸು 4:35; 13:21). [27]ಪುನರುತ್ಥಾನವನ್ನು ನಂಬದೆ ಇದ್ದ ಫರಿಸಾಯರು, ಧರ್ಮಶಾಸ್ತ್ರದ 5 ಪುಸ್ತಕಗಳನ್ನು ನಂಬಿದ್ದರೇ ವಿನ ಪ್ರವಾದಿಗಳನ್ನಲ್ಲ. [28]Bruce, 463. [29]ಗ್ರೀಕ್‌ನಲ್ಲಿ “ನೀನು” ಎಂದಿದ್ದರೂ ಅದು ಬಹುಪದವಾಗಿದೆ, ಅಗ್ರಿಪ್ಪನನ್ನು ಸಕಲ ಜನರನ್ನು ಕುರಿತು ಪೌಲನು ಮಾತನಾಡಿದನು. [30]ಯೇಸುವಿನ ಬಗ್ಗೆ ಮಾತ್ರ ಮಾತನಾಡಿದನು.

[31]*ಅಪೊಸ್ತಲರ ಕೃತ್ಯಗಳು, 2ನೇ* ನೋಡಿ, ಅವರು ಶಿಕ್ಷೆ ಹೊಂದಲು ನಿರಪರಾದಿಗಳಾಗಿದ್ದರು. [32]ಯೇಸುವನ್ನೆ, ಕರ್ತನೆಂದು ಹೇಳಬೇಕೆಂದು ಪೌಲನು ಹೇಳುತ್ತಿದ್ದನು, ಅದು ಯೆಹೂದ್ಯರಿಗೆ

ದೇವದೂಷಣೆಯಾಗಿತ್ತು, ಆತನು ಕರ್ತನಲ್ಲವೆಂದರೆ, ಕ್ರೈಸ್ತರಿಗೆ ದೇವದೂಷಣೆಯಾಗುತಿತ್ತು. ನಾನು ಅವರಿಗೆ ಒತ್ತಾಯಿಸಿದನು. [33]ಪೌಲನ ಪರಿವರ್ತನೆಯ ಕುರಿತ ಮೂರನೆಯ ಲೆಕ್ಕ "ಕೊಲೆಪಾತಕನು ಮುಳುಗುಸ್ನಾನ ಹೊಂದಿದನು." [34]McGarvey, 252-53. [35]"ಮುಳ್ಳುಗೋಲುಗಳು" ಎಂಬ ಬಹು ಪದ. ಪೌಲನಿಗೆ ತಿಳಿಯದ ವಿಧದಲ್ಲಿ "ಮುಳ್ಳುಗೋಲಿನ" ಬಾಧೆ ಉಂಟಾಯಿತು. [36]ವೇದನೆಯ ಮನಸ್ಸಾಕ್ಷಿಯಿಂದ ಪೌಲನು ಬಾದಿತನಾಗಿಲ್ಲ ಎಂಬುದನ್ನು ಮುಂದಿನ ಪಾಠದಲ್ಲಿ ಗುರುತಿಸಲಾಗಿದೆ (23:1ನ್ನು ನೋಡಿ "ಶಿಷ್ಯತ್ವದ ಹಾದಿಯಲ್ಲಿ" ಎಂಬ ಪಾಠವನ್ನು *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ ನೋಡಿರಿ). [37]ಹೆರೋದ ಮತ್ತು ಅವನ ಕುಟುಂಬದವರು, ಯೇಸುವಿನ ಹಾಗೂ ಆತನ ಅನುಯಾಯಿಗಳ ಸಂಪರ್ಕದಲ್ಲಿದ್ದರಿಂದ, ಯೇಸುವನ್ನು ಅರಿಯುವ ಸಾಧ್ಯತೆಯಿತ್ತು. [38]ಗ್ರೀಕ್‌ನ "ಮಿನಿಸ್ಟರ್" ಎಂದು (ಡೈಕೋನಸ್) ಗಿರದೆ, "ಹಡಗಿನ ತಳಭಾಗದ ಕೆಲಸ ಮಾಡುವ ಕೂಲಿ ಎಂಬುದಾಗಿದೆ." [39]ಪೌಲನಿಗೆ ಅಪೊಸ್ತಲ ಸ್ಥಾನ ನೀಡಲು ಯೇಸು ಅವನಿಗೆ ಕಾಣಿಸಿಕೊಂಡನು *ಅಪೊಸ್ತಲರ ಕೃತ್ಯಗಳು, 2ನೇ.* [40]"ಬಿಡುಗಡೆ" ಎಂಬ ಗ್ರೀಕ್ ಪದದ ಬದಲು "ಕಾಪಾಡಲ್ಪಡು" ಎಂಬ ಪದವನ್ನು ಗಮನಿಸಿರಿ.

[41]ಯೆಹೂದ್ಯರ ಬದಲು "ಜನರು" ಎಂಬುದಾಗಿದೆ. [42]ಅಗತ್ಯಕ್ಕನುಗುಣವಾಗಿ ಬಳಸಬಹುದು. [43]"ಯುದಾಯ ಪ್ರಾಂತದಲ್ಲೆಲ್ಲಾ" ಪೌಲನು ಸಾರಲಿಲ್ಲ (ಗಲಾತ್ಯ 1:18, 22-24). ಹಾಗೂ ಇತರೆ ಸಂದರ್ಭದಲ್ಲಿ ಅವನಿಗೆ ಅವಕಾಶಗಳಿತ್ತು (12:25; 15:2-4). [44]"ಪಶ್ಚಾತ್ತಾಪದ" ಕುರಿತು ತಿಳಿಸಬಹುದು. ಕತ್ತಲಿನಿಂದ ಬೆಳಕಿಗೆ ವಚನ 18. [45]KJV ಕ್ರಿಸ್ತನು ಮೊದಲಿಗೆ ಎದ್ದು ಬರಬೇಕು ಎಂದಿದೆ. ಕೊಲೊಸ್ಸೆ 1:18; 1 ಕೊರಿಂಥ 15:20. ಎದ್ದವರಲ್ಲಿ ಯೇಸು ಮೊದಲಿಗನಲ್ಲ. ಆತನು ನೂತನ ದೇಹವನ್ನು ಹೊಂದಿ ಎದ್ದವರಲ್ಲಿ ಮೊದಲಿಗನು, ಆತನು ಪುನ ಮರಣ ಹೊಂದುವದಿಲ್ಲ. [46]ಸ್ಥಳೀಯರಿಗನುಗುಣವಾಗಿ ಬಳಸಬೇಕು. [47]ಫೆಸ್ತನು, ಪೌಲನು ರಬ್ಬಿಯ ಬೋಧನೆ ಹೊಂದಿದವನೆಂದು ತಿಳಿದಿದ್ದನು. ಪೌಲನು ಸುರುಳಿ ಓದುವದನ್ನು ಗಮನಿಸಿರಬಹುದು (2 ತಿಮೊಥೆ 4:13 ನೋಡಿರಿ), ಅವನ ಮಾತಿಗೆ ಪ್ರಭಾವಿತನಾಗಿರಬಹುದು. [48]ಲೂಕ 1:3; ಅಪೊಸ್ತಲರ ಕೃತ್ಯಗಳು 23:26; 24:3; ಹೋಲಿಸಿ, ವ್ಯಕ್ತಿಯ ಬದಲಾಗಿ ಅವನ ಸ್ಥಾನಕ್ಕೆ ಗೌರವ ನೀಡಿದರು. [49]"ಕೋಪಗೊಂಡನು" ಎಂಬದಕ್ಕಿಂತಲೂ (ವಚನ 11), "ಮರುಳುಗೊಂಡನು" (ವಚನ 24), ಹುಚ್ಚ (ವಚನ 24), "ಸ್ಥಿರ ಮನಸ್ಸು ಇಲ್ಲದವನು" (ವಚನ 25). [50]"ಕ್ರೈಸ್ತರು" ಎಂಬ ಎರಡನೆಯ ಸಾರಿಯ ಹೇಳಿಕೆ, ಯೇಸುವಿನ ಶಿಷ್ಯರಿಗೆ ಹೇಳಿದ ಹೇಳಿಕೆ.

[51]ಅಲ್ಪ ಸಮಯದಲ್ಲಿಯೇ ನನ್ನನ್ನು ಕ್ರೈಸ್ತನನ್ನಾಗಿ ಮಾಡಲು ಅಸಾಧ್ಯ. ಅಥವಾ ಆಗುವಂತೆ, ಅರಿಯದ ರೀತಿಯಲ್ಲಿ ಅಗ್ರಿಪ್ಪನು ಈ ಪದವನ್ನು ಬಳಸಿದನು. [52]ಮೂರು ಪದಗಳು ಒತ್ತಿ ಹೇಳಿದ್ದು ನನ್ನದು ಎಂದಾಗದಿದೆ from Jimmy Allen, *Survey of Acts,* vol. 2 (Searcy, Ark.: By the Author, 1986), 138. [53]ಪೌಲನು ಅಗ್ರಿಪ್ಪನ ಬಗ್ಗೆ ತೀವ್ರವಾಗಿದಿದ್ದು ಅಗ್ರಿಪ್ಪನು ತಾನು ಹೇಳಿದ್ದರಲ್ಲಿ ಯಥಾರ್ಥನಾಗಿದ್ದನೆಂದು ನಂಬುದಕ್ಕೆ ಬಲವಾದ ವಾಗ್ವಾದವಾಗಿದೆ. [54]ಅಗ್ರಿಪ್ಪನು "ಕ್ರೈಸ್ತನಾಗುವದರ" ಬಗ್ಗೆ ಮಾತಾಡಿದನು ಆದರೆ ಪೌಲನು "ನನ್ನಂತವನಾಗಬೇಕೆಂದು" ಹೇಳಿದನು ಪೌಲನ ಜೀವಿತವು ಕ್ರೈಸ್ತನು ಏನಾಗಿರಬೇಕೆಂದು ಹೇಳುತ್ತದೆ. [55]ಸುಮಾರು 30 ವರ್ಷಗಳ ಹಿಂದೆ ಸ್ತ್ರೀ ಪುರುಷರನ್ನು ಬಂಧಿಸಲು ಪೌಲನು ಹಿಂಜರಿಯಲಿಲ್ಲ (9:2; 26:10). [56]ಲೂಕನು, ಪೌಲನ ಮುಗ್ಧತೆಯನ್ನು ತಿಳಿಸಿರುವನು. ಅಪೊಸ್ತಲರ ಕೃತ್ಯಗಳ ಪುಸ್ತಕದ "ಪ್ರತಿ ವಾದ ವಿದ್ಯೆ" ಉದ್ದೇಶದ ಬಗ್ಗೆ. (The word "apologetic" is from the Greek word *apologia*, which means "defense.") *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಹಿಂದೆಂದೂ ಬರೆಯಲ್ಪಡದ ಮಹಾ ಪ್ರಸಂಗ" ಎಂಬ ಪಾಠವನ್ನು ನೋಡಿರಿ, ಅಪೊಸ್ತಲರ ಕೃತ್ಯಗಳು ಯೇಸುವಿನ ಅನುಯಾಯಿಗಳ ಪರವಾಗಿವಾದ ಮಾಡುತ್ತದೆ. [57]ಕೈಸರೈನ ಮುಂದೆ ಹೇಳುವನು, ಎಂಬ ಮಾತಿನ ಮೇರೆಗೆ ದೇಶಾಧಿಪತಿಯು ಅವನನ್ನು ಕೈಸರನ ಬಳಿಗೆ ಕಳುಹಿಸಬೇಕಿತಷ್ಟೆ. [58]"ಮುಳ್ಳುಗೋಲಿನ ಅನುಭವದ ಮೂಲಕ," ದೇವರು ತನ್ನ ಜನರನ್ನು ತಿದ್ದುತ್ತಿದ್ದನು.